ದ್ವಿತೀಯ ಆಗಮ ಕಷಾಯ ಪಾಹುಡದ ಚೂರ್ಣಿಸೂತ್ರ ಮತ್ತು

ಉಚ್ಚಾರಣಾ ಸೂತ್ರ ವ್ಯಾಖ್ಯಾನಗಳು

ಪೂರ್ವಗಳಲ್ಲಿ ಐದನೆಯದಾದ ಜ್ಞಾನಪ್ರವಾದ ಪೂರ್ವದ ಹತ್ತನೇ ವಸ್ತು ಅಧಿಕಾರದಲ್ಲಿ ಒಳಗೊಂಡಿದ್ದ ಮೂರನೇಯ ಪಾಹುಡ ಪೆಜ್ಜದೋಸವಿಹತ್ತಿ–ಕಸಾಯ ಪಾಹುಡ ವನ್ನು ಗುರೂಪದೇಶದಿಂದ ಪಡೆದಿದ್ದ ಗುಣಧರಸ್ವಾಮಿಯವರು ಅದನ್ನು ಗಾಥಾ ಸೂತ್ರಗಳಲ್ಲಿ ಸಂಗ್ರಹಿಸಿ ಗ್ರಂಥರಚನೆ ಮಾಡಿದ ಸಂಗತಿಯನ್ನು ಹಿಂದೆ ಹೇಳಿದೆ. ಇದನ್ನು ಇವರು ನಾಗಹಸ್ತಿ ಮತ್ತು ಆರ್ಯಮಂಕ್ಷು ಮುನಿಗಳೀಏವರಿಗೆ ಉಪದೇಶಿಸಿ ದರು. ಇವರೀರ್ವರ ಬಳಿ ಆ ಸೂತ್ರಗಳನ್ನು ಯತಿವೃಷಭರು ಅಧ್ಯಯನ ಮಾಡಿ ಶಾಸ್ತ್ರಾರ್ಥ ನಿಪುಣರಾದರು. ಬಳಿಕ ಇವರು ಗಾಥಾವೃತ್ತಿ ಸೂತ್ರರೂಪದಿಂದ ೬,೦೦೦ ಗ್ರಂಥ ಪ್ರಮಾಣದ ಚೂರ್ಣಿಸೂತ್ರಗಳನ್ನು ರಚಿಸಿದರು.ಪುನಃ ಇವರ ಬಳಿ ಉಚ್ಚಾರಣಾಚಾರ್ಯ ಎಂಬುವರು ಗ್ರಂಥ ಮತ್ತು ಅರ್ಥರೂಪದಿಂದ  ಆ ಸೂತ್ರ ಗಳನ್ನು ಅಧ್ಯಯನ ಮಾಡಿ ಚೂರ್ಣಿಸೂತ್ರಗಳಿಗೆ ವೃತ್ತಿ ರೂಪದಿಂದ ೧೨,೦೦೦ ಗ್ರಂಥ ರೂಪದಿಂದ 'ಉಚ್ಚಾರಾಣಾ' ಎಂಬ ಹೆಸರಿನ ಸೂತ್ರಗಳನ್ನು ರಚಿಸಿದರು.ಈ ರೀತಿಯಾಗಿ ಗುಣಧರರು, ಯತಿವೃಷಭರು ಮತ್ತು ಉಚ್ಚಾರಣಾಚಾರ್ಯರಿಂದ ಗಾಥಾ, ಚೂರ್ಣಿ ಮತ್ತು ಉಚ್ಚಾರಣಾಸೂತ್ರಗಳ ರಚನೆಯೊಡನೆ ಕಸಾಯ ಪಾಹುಡವು ಸಂಗ್ರಹಿಸಲ್ಪಟ್ಟಿತು. ಹೀಗೆ ದ್ರವ್ಯಭಾವ ಪುಸ್ತಕಗತವಾದ ಈ ದ್ವಿವಿಧ(ಷಟ್ಖಂಡಾಗಮ ಮತ್ತು ಕಸಾಯಪಾಹುಡ) ಸಿದ್ಧಾಂತಗಳನ್ನು ಗುರು ಪರಿಪಾಟಿಯ ಮೂಲಕ ಕುಂದ ಕುಂದಪುರದಲ್ಲಿ ಪದ್ಮನಂದಿಯವರು ಪಡೆದರು.[೪೫]

ಶ್ರುತಾವತಾರದ ಈ ಮೇಲಿನ ಹೇಳಿಕೆಯಿಂದ ಪರಿಷ್ಕರಣಾರ್ಹವಾದ ಒಂದೆರಡು ಸಮಸ್ಯೆಗಳಿಗೆಡೆಯಾಗುವಂತಾಗಿದೆ. ಗುಣಧರರ ಪೆಜ್ಜದೋಸವಿಹತ್ತಿ–ಕಸಾಯ ಪಾಹುಡವು ಗಾಥಾ ಸೂತ್ರಗಳು ಯತಿವೃಷಭರ ಚೂರ್ಣಿ ಸೂತ್ರ ಮತ್ತು ಉಚ್ಚಾರಣಾ ಚಾರ್ಯರ ಉಚ್ಚಾರಣಾ ಸೂತ್ರಗಳ ಸಹಿತವಾಗಿ ಕುಂದಕುಂದಾಚಾರ್ಯರಿಗೆ ಗುರು ಪಾಟಿಯಿಂದ ದೊರೆಯಿತು ಎಂದು

ಹೇಳಿರುವುದರಿಂದ ಮೊದಲ ಮೂವರು ಆಚಾರ್ಯರು ಕುಂದಕುಂದಸ್ವಾಮಿಯವರಿಗಿಂತ ಹಿಂದಿನವರೆಂದು ನಿರ್ದಿಷ್ಟವಾಗುವುದು. ಇದಲ್ಲದೆ ಗುಣಧರರಿಂದ ಕಸಾಯ ಪಾಹುಡಗಾಥಾ ಸೂತ್ರದ ಉಪದೇಶ ಪಡೆದು ಅದನ್ನು ಯತಿ ವೃಷಭರಿಗೆ ಉಪದೇಶಿಸಿದ ನಾಗಹಸ್ತಿ ಮತ್ತು ಆರ್ಯಮಂಕ್ಷು ಅವರುಗಳ ಐತಿಹಾಸಿಕ ಸಂಗತಿಯು ಇಲ್ಲಿ ಪರಿಷ್ಕಾರಗೊಳ್ಳಬೇಕಾಗಿದೆ. ಅರ್ಹದ್ಬಲಿ ಸ್ವಾಮಿಯವರಿಂದಾದ ಮುನಿಗಳ ಸಂಘ ಮತ್ತು ಗಣಗಳ ವ್ಯವಸ್ಥೆಯ ಫಲಿತಾಂಶ ವಾಗಿ ಯಾವ ಪ್ರಕಾರ 'ಧರ' ಮತ್ತು 'ಸೇನ' ಎಂಬ ಉಪಪದಗಳಿಂದ ಅಂತ್ಯವಾಗುವ ಹೆಸರುಗಳನ್ನು ಗುಣಧರರು ಮತ್ತು ಧರಸೇನರು ಹೊಂದಿದರೆಂಬುದನ್ನು ಹಿಂದೆ ವಿವರಿಸಿದೆ. ಈ ರೀತಿಯದಾದ ಸಂಘವ್ಯವಸ್ಥೆಯ ನಿಮಿತ್ತದಿಂದ ಈ ಹೆಸರುಗಳನ್ನು

ಹೊದಿದ ಈ ಇರ್ವರು ಆಚಾರ್ಯರು ಸ್ವಲ್ಪ ಮಾತ್ರ ವ್ಯತ್ಯಾಸದ ಹಿರಿಯ ಕಿರಿಯ ವಯಸ್ಸಿನವರಾಗಿದ್ದು ಸಮಕಾಲೀನರಾಗಿದ್ದರೆಂದು ತಿಳಿಯಬಹುದಾಗಿದೆ.

ಧರಸೇನ ಸ್ವಾಮೀಯವರು ವೀ.ನಿ.ಸ. ೬೮೩ರ ಸಮಯಕ್ಕೆ ದಿವಂಗತರಾಗಿರು ವರೆಂದು ಹಿಂದೆ ವಿವರಿಸಿ ಸ್ಪಷ್ಟಪಡಿಸಿದೆ. ಆದ್ದರಿಂದ ಗುಣಧರರ ಕಾಲವನ್ನೂ ಸ್ಥೂಲವಾಗಿ ವೀ.ನಿ.ಸಂ. ೬೦೦ರಿಂದ ೬೮೫ರ ಮಧ್ಯವರ್ತಿಯಾದುದನ್ನಾಗಿ ಗಣನೆ ಮಾಡಬಹುದಾಗಿದೆ. ಇವರಿಂದ ಕಸಾಯ ಪಾಹುಡ ಗಾಥಾ ಸೂತ್ರದ ಉಪದೇಶ ಪಡೆದ ನಾಗಹಸ್ತಿ ಮತ್ತು ಆರ್ಯಮಂಕ್ಷು ಆಚಾರ್ಯರೀರ್ವರೂ ಗುಣಧರರ ಕಿರಿಯ ಸಮ ಕಾಲೀನರೆಂದು ಗಣನೆ ಮಾಡುವುದು ಸಮುಚಿತವಾಗಿದೆ. ಆದ್ದರಿಂದ ಇವರೀರ್ವರು ವೀ.ನಿ.ಸಂ. ೬೮೫ ವರ್ಷಗಳಿಗಿಂತ ಮುಂಚಿತವಾಗಿ, ಎಂದರೆ ಸುಮಾರು ವೀ.ನಿ. ಸಂ.೬೫೦ ಆಸುಪಾಸಿನಲ್ಲಿ, ಕಸಾಯಪಾಹುಡ ಗಾಥಾಸೂತ್ರಗಳ ಉಪದೇಶ ಪಡೆದು ಅದನ್ನು ಯತಿವೃಷಭರಿಗೆ ಉಪದೇಶ ಮಾಡಿರುವರೆಂದು ಗಣನೆ ಮಾಡಬಹುದಾಗಿದೆ. ಉಪಲಬ್ಧವಿರುವ ಪರಂಪರಾಗತ ಐತಿಹ್ಯದನುಗುಣವಾಗಿ ಷಟ್ಖಂಡಾಗಮವು ಮೊದಲ ನೆಯ ಲಿಬ್ದ ಆಗಮವಾಗಿರುವುದರಿಂದ ಇದಾದ ಅನತಿ ದೀರ್ಘ ಕಾಲದಲ್ಲಿ ಯತಿ ವೃಷಭರ ಚೂರ್ಣಿಪಾತ್ರ ಮತ್ತು ಉಚ್ಚಾರಣಾಚಾರ್ಯರ ಉಚ್ಚಾರಣಾಸೂತ್ರಗಳೊ ಡನೆ ಈ ದ್ವಿತೀಯ ಆಗಮವು ಲಿಪಿಬದ್ಧವಾಗಿದೆಯೆಂದು ತಿಳಿಯಬಹುದಾಗಿದೆ.

ನಾಗಹಸ್ತಿ ಮತ್ತು ಆರ್ಯಮಂಕ್ಷು ಅವರುಗಳನ್ನು ಶ್ವೇತಾಮಬರ ಪಂಥದ ನಂದಿ ಸೂತ್ರದ ಸ್ಥವಿರಾವಲಿಯಲ್ಲಿ ಆರ್ಯಮಹಾಗಿರಿಯವರ ಶಿಷ್ಯ ಸಂತತಿಯ ಅನುಕ್ರಮಥ ದಲ್ಲಿ ಹೆಸರಿಸಲಾಗಿದೆ. ಇಲ್ಲಿ ಆರ್ಯ ಮಂಕ್ಷು (ಆರ್ಯಮಂಗು) ಅವರನ್ನು ಮಹಾಗಿರಿ ಯವರಿಂದ ೭ನೇ ಅಥವಾ ೮ನೇ ಆಚಾರ್ಯರನ್ನಾಗಿ ಕಾಣಿಸಿದೆ. ಇವರ ಬಗ್ಗೆ 'ಇವರ  ವಾಯಗವಂಶ (ವಾಚಕ ವಂಶ) ವೃದ್ಧಿಯಾಗಲಿ' ಎಂದು ಹೇಳಿ, ಇವರನ್ನು 'ಕಮ್ಮ  ಪಯಡಿಪಹಾಣ' ಎಂದು ಹೇಳಿರುವುದು ಪ್ರಸ್ತುತ ಪ್ರಸಂಗದಲ್ಲಿ ಗಮನಾರ್ಹ ವಾಗಿದೆ. ಅಜ್ಜ ಮಂಗು ಅವರ ಕಾಲವನ್ನು ವೀ. ನಿ. ಸಂ. ೪೬೭ ಎಂದು ಹೇಳಿದೆ.[೪೬] ಹೀಗೆಯೇ ಅಜ್ಜನಾಗಹತ್ಥಿಯವರ ಕಾಲವನ್ನು ವೀ. ನಿ. ಸಂ. ೬೨೦ ಮತ್ತು ೬೮೦ರ ಮಧ್ಯವರ್ತಿಯಾಗಿದುದನ್ನಾಗಿ ಹೇಳಿದೆ.[೪೭]

ಆಗಮಪ್ರಸರಣಕ್ಕೆ ಸಂಬಂಧಿಸಿದಂತೆ 'ವಾಚಕ' ಎಂಬ ಪ್ರಶಸ್ತಿಯ ಆಶಯವನ್ನು ತಿಳಿದುಕೊಳ್ಳಬೇಕಾಗಿದೆ. ಈ ಬಗ್ಗೆ ಕಸಾಯ ಪಾಹುಡದ ಪ್ರಸ್ತಾವನೆಯಲ್ಲಿ೪೮ ಮುಂದಿನ ವಿವರಣೆಯಿದೆ. "ವಾಚಕ ಶಬ್ದವು 'ವಾಚನಾ'ದಿಂದ ರೂಪುಗೊಂಡಿದೆ. ಗ್ರಂಥ, ಅರ್ಥ, ಅಥವಾ ಇವೆರಡನ್ನೂ (ಉಪದೇಶ) ಕೊಡುವುದು 'ವಾಚನಾ' ಎನ್ನಿಸಿಕೊಂಡಿದೆ. ಹೀಗೆಂದರೆ ಯಾವ ಸಾಧುಗಳು ಶಿಷ್ಯರಿಗೆ ಗ್ರಂಥದಾನ ಮತ್ತು ಅರ್ಥದಾನ ಮಾಡುತ್ತಿದ್ದರೋ ಶಾಸ್ತ್ರಾಭ್ಯಾಸ ಮಾಡಿಸುತ್ತಿದ್ದರೋ, ಆ ಸಾಧುಗಳು 'ವಾಚಕ' ಎನ್ನಿಸಿಕೊಳ್ಳುತ್ತಿದ್ದರು, ಇದೇ ವಾಚಕ ಶಬ್ದದ ಯೌಗಿಕ ಅರ್ಥ. ಶ್ವೇತಾಂಬರ  ಸಾಹಿತ್ಯದಲ್ಲಿಯೂ 'ವಾಚಕ' ಶಬ್ದಕ್ಕೆ ಇದೇ ಅರ್ಥಕೊಡಲಾಗಿದೆ. 'ವಾಯಂತಿ ಸಿಸ್ಸಾಣಂ ಕಾಲಿಯಪುವ್ವ ಸುತ್ತಂ ತಿ ವಾಯಗಾ ಆಚಾರ್ಯ ಇತ್ಯರ್ಥಃ–ಗುರುಸಣ್ಣಿಧೇ 'ವಿನಯೇಭ್ಯಃ ಪೂರ್ವ ಗತಂ ಸೂತ್ರಂ ಅನ್ಯಚ್ಚ ವಾಚಯಂತೀತಿ ವಾಚಕಾಃ' (ನಂದೀ, ಹರಿಭದ್ರ ವೃತ್ತಿ). ಇದರಂತೆ 'ವಾಚಕ' ಎಂಬುದು ಒಂದು ಪದವಿಯ ಸೂಚಕವಾಗಿದ್ದಿ ತೆಂದು ಮತ್ತು ಈ ಪದವಿಯನ್ನು ಅಂಗ ಹಾಗೂ ಪೂರ್ವಗಳ ಅಭ್ಯಾಸ ಮಾಡುವು ದರಲ್ಲಿ ಮತ್ತು ಮಾಡಿಸುವುದರಲ್ಲಿ ನಿರತರಾಗಿದ್ದವರಿಗೆ ಕೊಡಲಾಗಿತ್ತಿದ್ದಿತು. ಈ ವಾಚಕಾಚಾರ್ಯರ ಮೂಲಕವೇ ಅರ್ಥ ಮತ್ತು ಸೂತ್ರರೂಪ ಪ್ರವಚನವು ಶಿಷ್ಯ ಪ್ರಶಿಷ್ಯ ಸಂತತಿಯಲ್ಲಿ ಹರಿದು ಬರುತ್ತಿದ್ದಿತು. ಶ್ವೇತಾಂಬರ ಪರಂಪರೆಯಲ್ಲಿ  'ವಾಚಕ' ಎಂಬುದರ ಅರ್ಥ 'ಪೂರ್ವ ವಿತ್' (ಪೂರ್ವಶ್ರುತವನ್ನು ತಿಳಿದವರು) ಎಂಬರ್ಥಲ್ಲಿಯೇ

ರೂಢವಾಗಿದೆ. ಪೂರ್ವ ಗ್ರಂಥದ ಜ್ಞಾನ ಹೊಂದಿದ್ದವರನ್ನು 'ವಾಚಕ' ಎಂದು ಕರೆಯಲಾಗಿತ್ತಿದ್ದಿತು. ಆಚಾರ್ಯ ಗುಣಧರರೂ ಪೂರ್ವಜ್ಞರಾಗಿ ದ್ದರಾಗಿ ಸಂಭವನೀಯವಾಗಿ ಈ ಕಾರಣದಿಂದಾಗಿಯೇ ಅವರನ್ನು 'ವಾಚಕ' ರೆಂದು ನಿರ್ದೇಶಿಸಲಾಗಿದೆ."–ಇವರನ್ನು ಜಯಧವಲಾದಲ್ಲಿ ಒಂದೆಡೆ (ಪು. ೩೬೫) ವಾಚಕ ರೆಂದು ನಿರ್ದೇಶಿಸಿದೆ.

ಜಯಧವಲಾದಲ್ಲಿ ಆರ್ಯಮಂಕ್ಷು ಮತ್ತು ಆರ್ಯ ನಾಗಹಸ್ತಿಗಳೀರ್ವರನ್ನೂ 'ಮಹಾವಾಚಕ'ರೆಂದು ನಿರ್ದೇಶಿಸಿದೆ.[೪೯]

ಆರ್ಯಮಂಕ್ಷು ಮತ್ತು ನಾಗಹಸ್ತಿಯವರನ್ನು ಶ್ವೇತಾಂಬರ ಪಂಥದ ಐತಿಹ್ಯದಲ್ಲಿ ಆರ್ಯ ಮಹಾಗಿರಿ ಸೂರಿಯವರ ಶಿಷ್ಯಾನುಕ್ರಮದಲ್ಲಿ ಹೆಸರಿಸಲಾಗಿದೆಯೆಂದು ಹಿಂದೆ ಹೇಳಿದೆ. ಹೀಗೆಯೇ ಆರ್ಯ ಮಹಾಗಿರಿಸೂರಿಯವರ ಶಿಷ್ಯಾನುಕ್ರಮದ ಜಿನಕಲ್ಪ ಮುನಿಗಳಲ್ಲಿ ಕೆಲವರಾದರೂ (ತೃ) ಭದ್ರಬಾಹುಸ್ವಾಮಿಯವರ ಕಾಲದಲ್ಲಿ ದಿಗಂಬರ ಪಂಥದ ಮುನಿವರ್ಗದಲ್ಲಿ ಸೇರಿಕೊಂಡರೆಂದು ಹಿಂದೆ ವಿವರಿಸಿದೆ. ಹೀಗೆ ಮೂಲತಃ ಶ್ವೇತಾಂಬರ ಧರ್ಮಪಂಥಾನುಯಾಯಿಗಳಾಗಿದ್ದು ದಿಗಂಬರ ಪಂಥದ ಮುನಿವರ್ಗವನ್ನು ಸೇರಿದವರಲ್ಲಿ ಆರ್ಯಮಂಕ್ಷು ಮತ್ತು ನಾಗಹಸ್ತಿಸೂರಿಯವರ ಹೆಸರುಗಳನ್ನು ಗಣನೆ ಮಾಡಬಹುದಾಗಿದೆ. ಪ್ರಾಯಶಃ ಗುಣಧರರೂ ಅದೇ ಜಿನಕಲ್ಪಿ ಮುನಿಸಂಘ ದವರಾಗಿದ್ದಿರಬಹುದಾದ ಸಂಭವವಿದೆ. ಇದರ ಬಗ್ಗೆ ಷಟ್ಖಂಡಾಗಮ ಮತ್ತು ಕಸಾಯ ಪಾಹುಡಗಳ ಮಧ್ಯೆ ಇರುವ ಮತಭೇದಗಳನ್ನು ಇಲ್ಲಿ ಗಮನಕ್ಕೆ ತಂದುಕೊಳ್ಳಬೇಕಾಗಿದೆ. ಗುಣಧರರು ಹಿಂದೆ ಹೇಳಿರುವಂತೆ ಅರ್ಹದ್ಬಲಿಸ್ವಾಮಿಯವರಿಂದಾದ ಸಂಘ–ಗಣ ವ್ಯವಸ್ಥೆಯ ನಿಮಿತ್ತದಿಂದ ಈ ಹೆಸರನ್ನು ಹೊಂದಿರುವರೆಂದು ಕಂಡುಬರುತ್ತದೆ. ಆದರೆ ಈ ಸಂಘದ ವ್ಯವಸ್ಥೆಯ ನಿಮಿತ್ತದಿಂದ ಆರ್ಯ ಮಂಕ್ಷು ಮತ್ತು ನಾಗಹಸ್ತಿ ಸೂರಿಯವರಿಗೆ ಸಂದ ಹೆಸರುಗಳು ಪ್ರಚಾರದಲ್ಲಿ ಬಾರದೆ ಮುಂಚಿನವಾದ ಹೆಸರು ಗಳೇ ಉಳಿದುಬಂದಿವೆಯೆಂದು ತಿಳಿಯಬೇಕಾಗುವುದು. ಷಟ್ ಖಂಡಾಗಮ ಮತ್ತು ಕಸಾಯ ಪಾಹುಡಗಳ ಸುಪ್ರಸಿದ್ಧ ವ್ಯಾಖ್ಯಾನಕಾರರಾದ ವೀರಸೇನಾಚಾರ್ಯರು ಈ ಕೃತಿಗಳ ಪೂರ್ವಕಾಲೀನ ವ್ಯಾಖ್ಯಾನಕಾರ ಆಚಾರ್ಯರಲ್ಲಿ ಸೈದ್ಧಾಂತಿಕ ಮತಭೇದ ಗಳಿರುವುದನ್ನು ಗುರುತಿಸಿ ಕೆಲವನ್ನು 'ಉತ್ತರಪ್ರತಿಪತ್ತಿ' ಎಂದೂ ಮತ್ತೆ ಕೆಲವನ್ನು 'ದಕ್ಷಿಣಪ್ರತಿಪತ್ತಿ' ಎಂದೂ ನಿರ್ದೇಶಿಸಿದ್ದಾರೆ. ಇವುಗಳಲ್ಲಿ

ದಕ್ಷಿಣ ಪ್ರತಿಪತ್ತಿಯವು ಗಳನ್ನು ಋಜು, ಎಂದರೆ ಸರಳ, ಸುಸ್ಪಷ್ಟ ಮತ್ತು ಆಚಾರ್ಯ ಪರಂಪರಾಗತವಾದವುಗಳೆಂದು ಹೇಳಿದ್ದಾರೆ. ಉತ್ತರ ಪ್ರತಿಪತ್ತಿಯವುಗಳು ಅನೃಜು ಎಂದರೆ ಸರಳವಲ್ಲ ದುವು ಮತ್ತು ಆಚಾರ್ಯ ಪರಂಪರಾಗತವಲ್ಲದುವು ಎಂದು ಹೇಳಿದ್ದಾರೆ.[೫೦] ಹೀಗೆಯೇ ಕಸಾಯ ಪಾಹುಡದ ಪ್ರಥಮ ವೃತ್ತಿಸೂತ್ರ ಚೂರ್ಣಿಕಾರರಾದ ಯತಿ ವೃಷಭರು ಎರಡು ಉಪದೇಶ ಪದ್ಧತಿಗಳನ್ನು ಸೂಚಿಸಿ ಒಂದು ಉಪದೇಶವನ್ನು 'ಪವ್ವಾಇಜ್ಜಂತ' ಎಂದೂ ಮತ್ತೊಂದನ್ನು 'ಅಪವಾಇಜ್ಜಂತ' ಎಂದೂ ಹೇಳಿ ದ್ದಾರೆ.[೫೧] ಇದಲ್ಲದೆ, ಇದೇ ಕಸಾಯಪಾಹುಡ ಟೀಕೆ ಜಯಧವಲಾದಲ್ಲಿ ಆರ್ಯ ಮಂಕ್ಷು ಮತ್ತು ಆರ್ಯ ನಾಗಹಸ್ತಿಯವರ ಮತಭೇದಗಳನ್ನು ಅನುಕ್ರಮದಿಂದ 'ಅಪವಾಇ ಜ್ಜಮಾಣ' ಮತ್ತು 'ಪವಾಇಜ್ಜಮಾಣ' ಎಂದು ಹೇಳಿದೆ.[೫೧] 'ಪವಾಇಜ್ಜಮಾಣ' ಎಂದರೆ ಸರ್ವಾಚಾರ್ಯ ಸಮ್ಮತವೂ, ಚಿರಕಾಲದಿಂದ ಅವಿಚ್ಛಿನ ಸಂಪ್ರದಾಯದ ಕ್ರಮದಿಂದ ಬಂದುದೂ ಆಗಿದ್ದು ಶಿಷ್ಯಪರಂಪರೆಯ ಮೂಲಕ ಬಂದುದು. ಇದರ ವಿರುದ್ಧವಾದುದು 'ಅಪವಾಇಜ್ಜ ಮಾಣ' ಈ ರೀತಿಯದಾದ ಮತಭೇದಗಳಿಗೆ ದಿಗಂಬರ ಮುನಿ ಸಮಾಜವನ್ನು ಸೇರಿದ ಅನಂತರದಲ್ಲಿಯೂ ಜಿನಕಲ್ಪಿಸಾಧುಗಳಲ್ಲಿ ಉಳಿದುಕೊಂಡಿದ್ದ ಶ್ವೇತಾಂಬರ ಪೂರ್ವಾಮ್ನಾಯದ ಪ್ರಭಾವವು ಕಾರಣವಾಗಿರ ಬೇಕೆಂದು ತಿಳಿಯಬಹುದಾಗಿದೆ. ಈ ತೆರನಾದ ಮತಭೇದವು ಷಟ್ಖಂಡಾಗಮ ಮತ್ತು ಕಷಾಯಪಾಹುಡ ಸಿದ್ಧಾಂತಗಳು ಮತ್ತು ಅವುಗಳ ವ್ಯಾಖ್ಯಾನಗಳಿಗೆ ಮಾತ್ರ ಸೀಮಿತ ವಾಗಿರದೆ, ದಿಗಂಬರ ಪಂಥದಲ್ಲಿ ಮಾನ್ಯತೆ ಹೊಂದಿರುವ ಇನ್ನೂ ಅನೇಕ ಧಾರ್ಮಿಕ ಕೃತಿಗಳಿಗೂ ಅನ್ವಿತವಾಗಿದೆ. ಉದಾಹರಣಾರ್ಥವಾಗಿ ಇಲ್ಲಿ ಒಂದೆರಡು ಕೃತಿಗಳ ಬಗ್ಗೆ ಪರಿಶೀಲನೆ ಮಾಡಬಹುದಾಗಿದೆ. ಸುಪ್ರಸಿದ್ಧ ತತ್ವಾರ್ತಸೂತ್ರವನ್ನು ದಿಗಂಬರ ಪಂಥ ದವರು ತಮ್ಮದೆಂದು ವಾದಗಳನ್ನು ಮಂಡಿಸಿದ್ದಾರಾದರೆ ಶ್ವೇತಾಂಬರ ಪಂಥ ದವರುತಮ್ಮದೆಂದು ವಾದ ಮಂಡಿಸಿದ್ದಾರೆ. ಈ ವಾದಗಳು ಇಂದಿಗೂ ಜೀವಂತ ವಾಗಿವೆ.[೫೨] ದಿಗಂಬರ ಪಂಥದ ಮಾನ್ಯತೆ ಪಡೆದಿರುವ ಮೂಲಾರಾಧನೆಯ ಬಗ್ಗೆಯೂ ವಿವಾದವಿದೆ. ರವಿಷೇಣರ ರಾಮಾಯಣ ಕಥೆ ಯಾಪನೀಯ ಪಂಥದ ವಿಮಲ ಸೂರಿಯವರ ಪೌಮ ಚರಿಯಂನ ಕಥೆಯೊಡನೆ ಸಾದೃಶ್ಯ ಹೊಂದಿದೆ. ಮತ್ತು ಮಹಾಪುರಾಣ (ಉತ್ತರಪುರಾಣದ) ರಾಮಾಯಣ ಕಥೆಗಿಂತ ಭಿನ್ನತರವಾದುದಗಿದೆ. ಪುನ್ನಾಟಸಂಘದ

ಜಿನಸೇನರ ಹರಿವಂಶಪುರಾಣದಲ್ಲಿ ಹೇಳಿರುವ ವೃಷಭ ತೀರ್ಥಂ ಕರನ ಚರಿತೆಯು ಎಷ್ಟೋ ಅಂಶಗಳಲ್ಲಿ ಜಿನಸೇನರ ಆದಿಪುರಾಣದ ಚರಿತೆಗಿಂತ ಭಿನ್ನತರವಾಗಿದೆ. ಭ. ಮಹಾವೀರಸ್ವಾಮಿಯವರ ತಾಯಿಯನ್ನು ಉತ್ತರ ಪುರಾಣದಲ್ಲಿ 'ಪ್ರಿಯಕಾರಿಣಿ' ಎಂದು ಮಾತ್ರ ಹೆಸರಿಸಲಾಗಿದೆಯಾದರೆ ಈ ಹೇಳಿದ ಹರಿವಂಶ ಪುರಾಣ ಮತ್ತು ಬೃಹತ್ಕಥಾ ಕೋಶಗಳಲ್ಲಿ ಈ ಹೆಸರಿನ ಜೊತೆಗೆ 'ತ್ರಿಶಲಾ' ಎಂಬ ಹೆಸರೂ ಸೇರಿದೆ. ಈ ಎಲ್ಲ ಮತಭೇದಗಳಿಂದ ಹಿಂದೆ ಹೇಳಿರುವಂತೆ, ಮೂಲತಃ ಶ್ವೇತಾಂಬರಪಂಥದ ಪೂರ್ವಾಮ್ನಾಯದ ಜಿನಕಲ್ಪಿ ಮುನಿಗಳಲ್ಲಿ ಕೆಲವರು ದಿಗಂಬರ ಪಂಥದ ಮುನಿವರ್ಗದೊಡನೆ ಸಂಮಿಳಿತವಾದುದನ್ನು ಪುಷ್ಟೀಕರಿಸುವುವಲ್ಲದೆ, ಆರ್ಯಮಂಕ್ಷು ಮತ್ತು ನಾಗಹಸ್ತಿಯವರು ಮೂಲತಃ ಜಿನಕಲ್ಪಿ ಮುನಿಪಂಥದವರಾಗಿದ್ದು ಅನಂತರದಲ್ಲಿ ದಿಗಂಬರ ಮುನಿವರ್ಗದಲ್ಲಿ ಸಂಮಿಳಿತರಾಗಿರುವರೆಂಬುದನ್ನೂ ಸಮರ್ಥನೆ ಮಾಡುತ್ತದೆ. ಗುಣಧರರಿಂದ ಮಹಾವಾಚಕ ಆರ್ಯಮಂಖು ಮತ್ತು ಆರ್ಯ ನಾಗಹಸ್ತಿಯವರು ಗುಣಧರಸ್ವಾಮಿರಚಿತ ಕಷಾಯ ಪಾಹುಡದೌಪದೇಶ ಪಡೆದರೆಂಬ ಶ್ರುತಾವತಾರದ ಐತಿಹ್ಯವನ್ನು ಹಿಂದೆ ಹೇಳಿದೆ. ಕಷಾಯ ಪಾಹುಡದ ಜಯಧವಲಾ ಟೀಕೆಯಲ್ಲಿಯೂ ಇದೇ ಅಭಿಪ್ರಾಯ ವ್ಯಕ್ತವಾಗುತ್ತದೆ.[೫೩] ಆದರೆ ಹಿಂದೆ ಹೇಳಿರುವಂತೆ ಶ್ವೇತಾಂಬರ ಇತಿವೃತ್ತದನಗುಣವಾಗಿ ಆರ್ಯಮಂಖು ಮತ್ತು ನಾಗಹಸ್ತಿಯವರ ಮಧ್ಯೆ ಸುಮಾರು ಏಳೆಂಟು ಆಚಾರ್ಯರ ಅಂತರವನ್ನು ಹೇಳಿರುವುದರಿಂದ ಆರ್ಯ ನಾಗಹಸ್ತಿಯವರು ಗುಣಧರರಿಂದ ನೇರವಾಗಿ  ಅರ್ಥ ಸಹಿತ ಕಸಾಹಪಾಹುಡದ ಉಪದೇಶವನ್ನು ಪಡೆದಿದ್ದರೆ ? ಎಂಬ ಸಂಶಯಕ್ಕೆ ಯಾಗುವುದು. ಇದೂ ಅಲ್ಲ್ದೆ, ಜಯಧವಲಾ ಮತ್ತು ಶ್ರುತಾಪತಾರಗಳೆರಡರಲ್ಲಿಯೂ ಹೇಳಿರುವಂತೆ, ಯತಿ ವೃಷಭರು, ಆರ್ಯಮಂಖು ಮತ್ತು ಆರ್ಯನಾಗ ಹಸ್ತಿಗಳೀರ್ವರ ಬಳಿ ಶಿಷ್ಯವೃತ್ತಿಯಲ್ಲಿದ್ದು ಕಸಾಯಪಾಹುಡದ ಉಪದೇಶ ಪಡೆದ ರೆಂದು ಹೇಳಿದೆಯಾಗಿ ಇದನ್ನು ಈ ಮೇಲೆ ಹೇಳಿದ ಶ್ವೇತಾಂಬರ ಐತಿಹ್ಯವು ಸಂದೇಹಕ್ಕೆಡೆ ಮಾಡುವುದು. ಆದರೆ, ಇದೇ ಶ್ವೇತಾಂಬರ ಐತಿಹ್ಯದ ನಂದಿಸೂತ್ರದಲ್ಲಿ ಆರ್ಯಮಂಖುವಿನ ಶಿಷ್ಯರು ಆರ್ಯನಂದಿಲ ಕ್ಷಪಣಕರೆಂದೂ ಇವರ ಶಿಷ್ಯ ಆರ್ಯ ನಾಗಹಸ್ತಿಯವರೆಂದೂ ನಿರ್ದೇಶಿಸಿದೆ. ಇಷ್ಟು ಮಾತ್ರವಲ್ಲ. ನಂದಿಸೂತ್ರಚೂರ್ಣಿ ಮತ್ತು ಹರಿಭದ್ರೀಯ ವೃತ್ತಿಯಲ್ಲಿಯೂ ಇದೇ ಕ್ರಮವಿದೆ.[೫೪] ಆದ್ದರಿಂದ ಆರ್ಯ ನಾಗಹಸ್ತಿಯವರನ್ನು

ಆರ್ಯಮಂಖು ಅವರ ಕಿರಿಯ ಸಮಾಕಾಲೀನರಾಗಿದ್ದರೆಂದೂ ಇವರು ಗುಣಧರರಿಂದ ಅರ್ಥಸಹಿತ ಕಸಾಯ ಪಾಹುಡದ ಉಪದೇಶ ಪಡೆದಿರುವ ಪಡೆದಿರುವ ರೆಂದೂ ಗ್ರಹಿಸಲು ಬಾಧಕವಾಗುವುದಿಲ್ಲ

ಆಚಾರ್ಯರುಗಳ ಕಾಲ ನಿರ್ದೇಶನದಲ್ಲಿ ಶ್ವೇತ್ಯಾಂಬರ ಪಟ್ಟಾವಲಿಗಳ ಹೇಳಿಕೆಗಳು ವಿಶ್ವಾಸಾರ್ಹವಾಗಿಲ್ಲವೆಂದು ಹಿಂದೆ ಹೇಳಿದೆ. ಇದರ ಕಾರಣವನ್ನು ಇಲ್ಲಿ ಹೇಳುವುದು ಪುನರುಕ್ತಿಯಾಗುತ್ತದೆ. ಆದರೂ ಇಲ್ಲಿ ಒಂದು ಅಂಶವನ್ನು ಹೇಳಿದಲ್ಲಿ ಅದು ಅತಿ ಎನಿಸಲಾರದು. ಶ್ವೇತಾಂಬರ ಆಮ್ನಾಯದಲ್ಲಿ ಆರ್ಯ ಮಹಾಗಿರಿಯವರ ಅನುಕ್ರಮದ ಮತ್ತು ಆರ್ಯ ಸುಹಸ್ತಿಯವರ ಅನುಕ್ರಮದ ಎರಡು ಗುರ್ವಾವಲಿಗಳಿವೆ. ಎಷ್ಟೋ ಸಂದರ್ಭಗಳಲ್ಲಿ ಆರ್ಯ ಮಹಾಗಿರಿ ಶಿಷ್ಯ ಸಂತತಿಯ ಆಚಾರ್ಯರ ಹೆಸರು ಗಳು ಆರ್ಯ ಸುಹಸ್ತಿಯವರ ಶಿಷ್ಯ ಸಂತತಿಯ ಮಧ್ಯೆ ಸೇರಿವೆ. ಉದಾಹರಣೆಯಾಗಿ ಆರ್ಯ ವಜ್ರರ ಹೆಸರು ಆರ್ಯ ಮಹಾಗಿರಿಯವರ ಅನುಕ್ರಮದಲ್ಲಿ ೧೬ನೇಯದಾಗಿದ್ದರೆ ಆರ್ಯ ಸುಹಸ್ತಿಯವರ ಅನುಕ್ರಮದಲ್ಲಿ ೧೧ನೆಯದಗಿದೆ. ಇಂತಹ ಇನ್ನೂ ಒಂದೆರಡು ಸಂದರ್ಭಗಳನ್ನು ಗುರುತಿಸಬಹುದು. ಇದರಿಂದ ಈ ಅನುಕ್ರಮಗಳ ಆಚಾರ್ಯರ ಕಾಲನಿರ್ಣಯ ಯಥಾಸೂಕ್ತವಾಗಿದೆಯೆಂದು ಹೇಳಲಾಗುವುದಿಲ್ಲ. ಗುಣಧರ ಸ್ವಾಮಿಯವರು ವೀ. ನಿ. ಸಂ. ೬೫೦ರ ಪೂರ್ವಾಪರ ಸಮಯದಲ್ಲಿದ್ದ ರೆಂದು ನಿರ್ಣಯಿಸಬಹುದಾಗಿದೆ. ಇವರಿಂದ ಕಸಾಯಪಾಹುಡದ ಉಪದೇಶ ಪಡೆದ ಆರ್ಯಮುಂಕ್ಷು ಮತ್ತು ಯರನ್ನು ಪುಷ್ಪದಂತ ಮತ್ತು ಭೂತಬಲಿಯವರಹಿರಿಯ ಸಮಕಾಲೀನರೆಂದು ಗಣನೆ ಮಾಡಬಹುದು. ಪುನಃ ಇವರಿಬ್ಬರಿಂದ ಅರ್ಥ ಸಹಿತವಾಗಿ ಕಸಾಯ ಪಾಹುಡದ ಉಪದೇಶ ಪಡೆದ ಯತಿವೃಶಭರನ್ನು ಪುಷ್ಪದಂತ ಮತ್ತು ಭೂತಬಲಿಯವರ ಸ್ವಲ್ಪ ಮಾತ್ರ ಕಿರಿಯ ಸಮಕಾಲೀನರೆಂದು ಗಣನೆ ಮಾಡಬಹುದಾಗಿದೆ.

ಗುಣಧರ ಸ್ವಾಮಿಯವರು ಕಸಾಯ ಪಾಹುಡವನ್ನು ಅರ್ಥಸಹಿತ ಆರ್ಯಮಂಖು ಮತ್ತು ಆರ್ಯ ನಾಗಹಸ್ತಿ ಅವರುಗಳಿಗೆ ಉಪದೇಶಿಸಿದರೆಂದಿದೆ. ಈ ಉಪದೇಶವು ಮೌಖಿಕ ರೂಪದಲ್ಲಿಯೇ ಯತಿ ವೃಷಭರಿಗೆ ದೊರೆತಿದೆ. ಪ್ರಾಯಶಃ ಯತಿ ವೃಷಭರು ತಮಗೆ ದೊರೆತ ಉಪದೇಶವನ್ನು ೬೦೦೦ ಶ್ಲೋಕ ಪ್ರಮಾಣದ ವೃತ್ತಿಸೂತ್ರಚೂರ್ಣಿ ಯೊಡನೆ ಉಚ್ಚಾರಣಾಚಾರ್ಯರಿಗೆ ಉಪದೇಶಿಸಿದ್ದು ಈ

ಬಳಿಕ ಉಚ್ಚಾರಣಾಚಾರ್ಯರು ತಾವು ಪಡೆದ ಉಪದೇಶವನ್ನು ತಮ್ಮದೇ ಆದ ಉಚ್ಚಾರಣಾ ಸೂತ್ರವೃತ್ತಿ ಯೊಡನೆ ಲಿಪಿಬದ್ಧಗೊಳಿಸಿರುವರೆಂದು ಇಂದ್ರನಂದಿಯವರ ಶ್ರುತಾವತಾರದ, 'ಈ ರೀತಿಯಾಗಿ ಕಷಾಯ ಪ್ರಾಭೃತವು, ಗುಣಧರ, ಯತಿ ವೃಶಭ ಮತ್ತು ಉಚ್ಚಾರಣಾ ಚಾರ್ಯರಿಂದ (ಅನುಕ್ರಮವಾಗಿ) ಗಾಥಾಸೂತ್ರ, ಚೂರ್ಣಿ ಉಚ್ಚಾರಣಾ ಸೂತ್ರಗಳೊ ಡನೆ ಉಪ ಸಂಹೃತವಾಯಿತು'ಎಂಬ ಹೇಳಿಕೆಯಿಂದ ಸೂಚಿತವಾಗುವುದು. ಯತಿ ವೃಷಭರ ಚೂರ್ಣಿಸೂತ್ರದಲ್ಲಿ ಎಂಟನೆಯ ಕರ್ಮಪ್ರವಾದ ಪೂರ್ವ ಮತ್ತು ೨ನೆಯ ಪೂರ್ವ ಆಗ್ರಾಯಣೀಯಪೂರ್ವದ ೫ನೇ ವಸ್ತು-ಅಧಿಕಾರದ ನಾಲ್ಕನೇ ಪ್ರಾಭೃತ ಕರ್ಮ ಪ್ರಕೃತಿಯನ್ನು ಹೆಸರಿಸಿದ್ದಾರೆ. ಈ ಪ್ರಾಭೃತದಿಂದಲೇ ಷಟ್ಖಂಡಾಗಮದ

ಉದಯವಾಗಿವೆ.[೫೫] ಪರಿಶೀಲನೆಯಿಂದ ಯತಿ ವೃಷಭರು (ಷಟ್ ಖಂಡಾಗಮದ ೬ನೇ ಭಾಗವಾದ) ಮಹಾಬಂಧದ ಉಪಯೋಗ ಮಾಡಿಕೊಂಡಿರುವರೆಂದು ಹೇಳಬಹುದಾ ಗಿದೆ.[೫೫] ಇದರಿಂದ ಯತಿ ವೃಷಭರ ಕಾಲವನ್ನು ಗರಿಷ್ಠ ಮಿತಿಯಿಂದ ಮಹಾಬಂಧದ ರಚನೆಯಾದ ಅನತಿದೀರ್ಘ ಸನ್ನಿಕೃಷ್ಟಕಾಲವೆಂದು ಗಣನೆ ಮಾಡಬಹುದಾಗಿದೆ. ಆದರೆ ಯತಿವೃಷಭರ ಕಾಲನಿರ್ಣಯದಲ್ಲಿ ಜಟಿಲವಾದ ತೊಡಕಿದೆ. ಇದಕ್ಕೆ ಕಾರಣ 'ತಿಲೋಯಪಣ್ಣತ್ತಿ'ಯೂ ಇವರಿಂದಲೇ ರಚಿತವಾಗಿದೆಯೆಂಬ ಅಭಿಮತವೇರ್ಪ ಟ್ಟಿದ್ದು ಇದರ ಪರಿಷ್ಕಾರವಾಗಬೇಕಾದ ಅಗತ್ಯವಿದೆ.

ಇಂದ್ರನಂದಿಯವರ ಶ್ರುತಾವತಾರದ ಹೇಳಿಕೆಯಂತೆ ಯತಿವೃಷಭರ ಚೂರ್ಣಿ ಸೂತ್ರ ಮತ್ತು ಉಚ್ಚಾರಣಾಚಾರ್ಯರ ಉಚ್ಚಾರಣಾ ಸೂತ್ರ ಸಹಿತವಾಗಿ ಉಪ ಸಂಹೃತವಾದ ಕಸಾಯಪಾಹುಡವು ಗುರುಪರಿಪಾಠಿಯಿಂದ ಕುಂದಕುಂದಪುರದಲ್ಲಿ ಪದ್ಮನಂದಿ, ಎಂದರೆ ಕುಂದಕುಂದರಿಗೆ ದೊರಕಿದೆ. ಇದರಂತೆ ಕುಂದಕುಂದಸ್ವಾಮಿ ಯವರು ಯತಿ ವೃಶಭರಿಗಿಂತ ಇತ್ತೀಚಿನ ಕಾಲದವರೆಂಬುದು ಸ್ವತಃ ಸ್ಪಷ್ಟವಿದೆ. ಆದರೆ ಇದನ್ನು ಅವಿಶ್ವಾಸಾರ್ಹವೆನಿಸಿ ಕಾಣಿಸುವ ಈ ಮುಂದಿನ ವಿಚಾರ ಉದ್ಭೂತ ವಾಗಿದೆ. ಇದರಂತೆ 'ಚೂರ್ಣಿಸೂತ್ರಕರ್ತ್ಯಗಳಾದ ಯತಿ ವೃಷಭರೇ ತಿಲೋಯಪಣ್ಣತ್ತಿ (ತ್ರಿಲೋಕಪ್ರಜ್ಞಪ್ತಿ)ಯ ಕೃರ್ತವಾಗಿದ್ದಾರೆ. ತಿಲೋಯಪಣ್ಣತ್ತಿಯಲ್ಲಿ ಭಗವಾನ್ ಮಹಾವೀರನ ನಿರ್ವಾಣಾನಂತರದಲ್ಲಿ ೧೦೦೦ ವರ್ಷಗಳ ಸಮಯದಲ್ಲಿದ್ದ ಕಲ್ಕಿಯ ವಿಷಯದ ನಿರೂ ಪಣೆಯಿದೆ.

ಇದಲ್ಲದೆ ಕಲ್ಕಿಯ ಮರಣದ ಅನಂತರ ಅವನ ಮಗ ಅಜಿಂತಯನು ಎರಡು ವರ್ಷಕಾಲ ಧರ್ಮಪೂರ್ವಕ ರಾಜ್ಯವಾಳಿದ್ದಾನೆಂದು ಹೇಳಿದೆ. ಆದ್ದರಿಂದ ಸ್ಥೂಲವಾಗಿ ತಿಲೋಯಪಣ್ಣತ್ತಿಯ ರಚನಾಕಾಲವನ್ನು (ಶಾ. ಶ. ೪೦೦) ಕ್ರಿ. ಶ. ೪೭೮ ಎಂದು ಗಣನೆಯಾಗುವುದಾಗಿ ಯತಿ ವೃಷಭರ ಕಾಲವನ್ನೂ ಹೆಚ್ಚು ಕಡಿಮೇ ಇದೇ ಕಾಲವೆಂದು ತಿಳಿಯಬೇಕಾಗುವುದು’.

’ಕುಂದಕುಂದಾಚಾರ್ಯರು ತಮ್ಮ ನಿಯಮಸಾರದಲ್ಲಿ ‘ಸ್‌ಲೋಯವಿಭಾಗೇಸು’ ಎಂದು ಹೇಳಿ ಲೋಕವಿಭಾಗದ ಹೆಸರನ್ನು ಹೇಳಿದ್ದಾರೆ.[೨೬] ಈ ಲೋಕವಿಭಾಗ ಪರಮಾಗವು ಸರ್ವನಂದಿಯವರಿಂದ ಶ. ಸಂ. ೩೮೦ರಲ್ಲಿ (ಕ್ರಿ. ಶ. ೪೫೮ರಲ್ಲಿ)ರಚಿತವಾಗಿದೆಯಾದ್ದರಿಂದ ಕುಂದಕುಂದಸ್ವಾಮಿಯವರು ಈ ಕಾಲದ ಅನಂತರದವ ರೆಂದು ಗಣನೆ ಮಾಡಬೇಕಾಗುವುದು. ಇದರಿಂದ ಕುಂದಕುಂದರು ಯತಿ ವೃಷಭರ ಸಂಕಾಲೀನರೆಂಬ ಇಂದ್ರನಂದಿಯವರ ಅಭಿಮತವೂ ಅಂಗೀಕಾರಾರ್ಹವಾಗುವುದು. ಆದರೆ ಈ ನಿರ್ಣಯದ ಬಗ್ಗೆ ಒಂದು ಆಪತ್ತಿಯಿದೆ. ಶಕ. ಸಂ. ೩೮೮ರ ಮರ್ಕರಾ (ಕುರ್ಗ್) ಶಿಲಾಲೇಖದಲ್ಲಿ ಚಂದ್ರನಂದಿಭಟ್ಟಾರಕರ ಹಿಂದಿನ ಐವರು ಗುರುಗಳ ಉಲ್ಲೇಖವಿದೆ. ಇವೆರಲ್ಲರನ್ನೂ ಕುಂದಕುಂದಾನ್ವಯದವರೆಂದು ಕಾಣಿಸಿದೆ. ಇದರಿಂದ ಕುಂದಕುಂದರನ್ನು ಸುಮಾರು ನೂರು ನೂರಿಪ್ಪತ್ತು ವರ್ಷಗಳಷ್ಟು ಹಿಂದಿನವ ರೆಂದು ಗಣನೆ ಮಾಡಬೇಕಾಗುವುದರಿಂದ ಅವರ ಕಾಲವು ಶ. ಸ. ೨೬೮ರ ಸರಿಸುಮಾರಿ ನಲ್ಲಿ ನಿಲ್ಲುವುದು. ಇದರಿಂದ ಯತಿ ವೃಷಭರನ್ನು ಕುಂದಕುಂದರಿಗಿಂತ ಅನಂತರದವರೆಂದು ಒಪ್ಪಬೇಕಾಗುವುದಾಗಿ ಅದು ಅಸಂಗತವಾಗಿ ಬಿಡುವುದು. ಆದರೆ ಇದಕ್ಕೆ ಒಂದು ಸಮಾಧಾನ ಹೇಳಬಹುದಾಗಿದೆ. ‘ಕುಂದಕುಂದಾನ್ವಯ’ ಎಂಬುದು ಕುಂದ ಕುಂದರ ಹೆಸರಿನಿಂದ ಮೂಡಿರದೆ ಕುಂದಕುಂದಪುರ ಎಂಬುದರಿಂದ ಮೂಡಿದೆ.ಇದಕ್ಕೆ ಸಮಾನಾಂತಾರ ದೃಷ್ಟಾಂತಗಳಿವೆ. ‘ಶ್ರೀಪುರ’ದಿಂದ ಶ್ರೀಪುರಾನ್ವಯ, ಅರುಂಗಲದ ಅರುಂಗಲಾನ್ವಯ, ಕಿತ್ತೂರಿನ ಕಿತ್ತೂರಾನ್ವಯ, ಮಥುರಾದ ಮಥುರಾನ್ವಯ ಮುಂತಾದವು. ಪದ್ಮನಂದಿಯವರು ಕೊಡಕುಂದಾನ್ವಯದವರಾಗಿರುವಂತೆಯೇ ಮರ್ಕರಾ ಶಾಸನದ ಇತರ ಆಚಾರ್ಯರೂ ಕೊಡಕುಂದಾನ್ವಯದವರಾಗಿದ್ದಾರೆ. ಪದ್ಮನಂದಿಯವರು ಕುಂದಕುಂದಾನ್ವಯದಲ್ಲಿ ಬಹು ಪ್ರಸಿದ್ಧ ಆಚಾರ್ಯರಾಗಿದ್ದುದ ರಿಂದ ಹಾಗೂ ಪ್ರಭಾವಶಾಲೀ ಆಚಾರ್ಯರಾಗಿದ್ದುದರಿಂದ ಅವರಿಗೆ

'ಕುಂದಕುಂದ' ಎಂಬುದು ಒಂದು ಹೆಸರಾಗಿಯೇ ಆಗಿ ಬಿಟ್ಟಿದೆ. ಇದರ ಉದಾಹರಣೆ : ತುಂಬಲೂರ ಗ್ರಾಮದಿಂದ ತುಂಬುಲೂರಾಚಾರ್ಯರು. ಆದ್ದರಿಂದ ಕುಂದಕುಂದರನ್ನು ಯತಿ ವೃಶಭರಿಂದೀಚಿನವರೆಂದು ತಿಳಿಯಲು ಯಾವಭಾದೆಯೂ ಇಲ್ಲ. ಇದು ದಿ. ಶ್ರೀ. ನಾಥೂರಾಂ ಪ್ರೇಮಿಯವರ ವಾದಸರಣಿಯಾಗಿದೆ'.[೫೭]

ದಿ. ಶ್ರೀ ನಾಥೂರಾಂ ಪ್ರೀಮಿಯವರು ಯತಿ ವೃಷಭರನ್ನು ಕ್ರಿ. ಶ. ೪೭೮ರ ಸರಿ ಸುಮಾರಿನವರೆಂದು ಗುರುತಿಸಿ ಕುಂದಕುಂದರನ್ನು ಅವರ ಸಮಕಾಲೀನರೆಂದು ಶ್ರಮಪಟ್ಟು ನಿರೂಪಿಸಲೆತ್ನಿಸಿದ್ದಾರೆ. ಕಸಾಯ ಪಾಹುಡ (ಭಾಗ ೧ರ) ಪ್ರಸ್ತಾವನಾಕಾರರು ಮಾನ್ಯ ದಿ. ಶ್ರೀ. ನಾಥಾರಾಂ ಪ್ರೇಮಿಯವರ ಅಭಿಪ್ರಾಯವನ್ನು ಭಾಗಶಃ ಒಪ್ಪಿ ಯತಿವೃಷಭರನ್ನು ಶಕ. ಸಂ. ೪೦೦(ಕ್ರಿ.ಶ. ೪೭೮)ರ ಸರಿಸುಮಾರಿನವರೆಂದು ಒಪ್ಪಿರುವರಾದರೂ ಕುಂದಕುಂದರನ್ನು ಯತಿ ವೃಷಭರಾನಂತರಕಾಲದವರೆಂಬ ಸಂಗತಿಯನ್ನು ಮಾತ್ರ ಒಪ್ಪದೇ ಹೋಗಿದ್ದಾರೆ.

ಕುಂದಕುಂದರ ನಿಯಮಸಾರದಲ್ಲಿ ಹೇಳಿರುವ 'ಲೋಯವಿಭಾಗೇಸು' ಎಂಬುದು ಸರ್ವನಂದಿಯವರಿಂದ ಶಕಸಂ. ೩೮೦(ಕ್ರಿ.ಶ. ೪೫೮)ರಲ್ಲಿ ರಚಿತವಾಗಿದೆಯೆಂದು ಹೇಲಲಾಗಿರುವ 'ಲೋಕವಿಭಾಗದ' ಸೂಚಕವಾಗಿರಲು ಸಾಧ್ಯವಿಲ್ಲ, ಕಾರಣ 'ಲೋಯ ವಿಭಾಗೇಸು' ಎಂಬುದು ಬಹುವಚನ(ಅಥವಾ ದ್ವಿವಚನ)ದಲ್ಲಿದ್ದು ಒಂದಕ್ಕಿಂತ ಹೆಚ್ಚು ಸಂಖ್ಯೆಯ ಸೂಚಕವಾಗಿರುವುದರಿಂದ ಇದು ಸರ್ವನಂದಿಯವರದೆಂದು ಹೇಳಲಾಗಿ ರುವ 'ಲೋಕವಿಭಾಗ'ದ ನಿರ್ದೇಶಕವಾಗಲಾರದೆಂದು ಅಭಿಪ್ರಾಯ ಪಡಲಾಗಿದೆ.[೫೮] ಆದ್ದರಿಂದ ನಿಯಮಸಾರದ 'ಲೋಯವಿಭಾಗೇಸು' ಎಂಬುದು ಶಕ. ಸಂ. ೩೮೦ರಲ್ಲಿ ರಚಿತವಾಗಿದೆಯೆಂದು ಹೇಳಲಾಗಿರುವ 'ಲೋಕವಿಭಾಗದ' ನಿರ್ದೇಶಕವೆಂದು ಗ್ರಹಿಸ ಲಾಗುವುದಿಲ್ಲ. ಇನ್ನು 'ಕುಂದಕುಂದಾನ್ವಯ' ಎಂಬುದು ಕುಂದಕುಂದರ ಅನ್ವಯ ಎಂಬ ಅರ್ಥ ಕೊಡದೆ ಶ್ರೀಪುರಾನ್ವಯ ಎಂದು ಮುಂತಾದವುಗಳಂತೆ ಕುಂದಕುಂದ ಪುರದ ಅನ್ವಯ ಎಂದು ಅರ್ಥಮಾಡಿಕೊಳ್ಳಬೇಕೆಂದೂ ಈ ಅರ್ಥದಂತೆ ಕುಂದ ಕುಂದರೂ ಕುಂದಕುಂದಾನ್ವಯ ಪರಂಪರೆಯ ಆಚಾರ್ಯರಾಗಿರುವರೆಂಬ ಮಾನ್ಯ ಶ್ರೀ ನಾಥೂರಾಂ ಪ್ರೇಮಿಯವರ ಹೇಳಿಕೆ ಕಸಾಯ ಪಾಹುಡದ

ಪ್ರಸ್ತಾವನಾಕಾರರಿಗೆ ಒಪ್ಪಿಗೆಯಿಲ್ಲ[೫೮]. ಇಷ್ಟು ಮಾತ್ರವಲ್ಲ. ಶ್ರೀನಾಥೂರಾಂ ಪ್ರೇಮಿ ಅವರ ಈ ಬಗೆಗಿನ ವಾದಸರಣಿ ಸ್ವತಃ ಅರ್ಥಹೀನವಾಗಿದೆಯೆಂಬುದನ್ನೂ ಸದ್ಯ ಪ್ರಸಂಗದಲ್ಲಿ ಗಮನಿಸ ಬಹುದಾಗಿದೆ. ಮೊದಲನೆಯದಾಗಿ ಪದ್ಮನಂದಿ (ಕುಂದಕುಂದ) ಅವರಿಗಿಂತಲೂ ಪೂರ್ವಭಾವಿಯಾಗಿಯೇ ಕುಂದಕುಂದ (ಕೊಂಡ ಕೊಂಡೈ) ಪುರದ ಹೆಸರಿನ ಮೂಲ ದಿಂದ ಕುಂದಕುಂದಾನ್ವಯ ಪ್ರಚಲಿತವಾಗಿದ್ದಿತೆಂದು ಮತ್ತು ಆ ಅನ್ವಯದಲ್ಲಿ ಪದ್ಮನಂದಿಯವರು ಆಗಿರುವರೆಂದು ಹೇಳಿದ್ದಾರೆ. ಆದರೆ ಈ ಹೇಳಿಕೆ ಆಧಾರವೇ ಇಲ್ಲದ ಊಹೆ ಮಾತ್ರದ್ದಾಗಿದೆ. ಪದ್ಮನಂದಿಯವರು ಕುಂದಕುಂದಪುರದವರಾಗಿದ್ದು ದರಿಂದ ಅವರಿಗೆ 'ಕುಂದಕುಂದ' ಎಂಬ ಹೆಸರು ಬಂದಿದೆಯೆಂದು ಮತ್ತು ಕೆಲವು ಪ್ರದೇಶಗಳಲ್ಲಿ ವ್ಯಕ್ತಿಗಳನ್ನು ಅವರ ಸ್ಥಳಗಳ ಹೆಸರುಗಳಿಂದ ಹೆಸರಿಸುವ ರೂಢಿ ಹಿಂದಿನಿಂದಲೂ ಉಳಿದುಬಂದಿದೆ ಎಂದು ಹಿಂದೆ ಸ್ಪಷ್ಟಪಡಿಸಿದೆ. ಈ ವ್ಯಕ್ತಿಗಳಿಗೆ ನಾಮಕರಣದ ಬೇರೆ ಹೆಸರುಗಳದ್ದರೂ ಆ ಹೆಸರುಗಳು ಹೆಚ್ಚು ಪ್ರಚಾರಕ್ಕೆ ಬಾರದೆ ಅವರ ಸ್ಥಳಗಳ ಹೆಸರುಗಳಿಂದ ರೂಢವಾದ ಹೆಸರುಗಳೇ ಹೆಚ್ಚು ಪ್ರಚಲಿತವಿದ್ದು ಆ ಹೆಸರುಗಳೇ ಉಳಿದು ಬಂದಿರುವುದರ ಉದಾಹರಣೆಯಾಗಿ 'ತುಂಬಲೂರಾಚಾರ್ಯ' ಎಂಬುದನ್ನು ಗಮನಿಸಬಹುದು. ಇದರಂತೆಯೇ 'ಕುಂದಕುಂದ' ಎಂಬ ಸ್ಥಳವಾಚಕ ಹೆಸರೇ 'ಪದ್ಮನಂದಿ' ಎಂಬ ಹೆಸರಿಗಿಂತಲೂ ಹೆಚ್ಚು ಪ್ರಸಿದ್ಧಿಗೆ ಬಂದು ಈ ಹೆಸರಿ ನಿಂದಲೇ ಅವರ ಅನ್ವಯವು ಪ್ರಚಲಿತವಾಗಿದೆಯೆಂದು ಡಾ. ಪಿ. ಬಿ. ದೇಸಾಯರೇ ಮೊದಲಾದ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಇದರಂತೆ 'ಕುಂದಕುಂದಾ ನ್ವಯ' ಎಂಬುದಕ್ಕೆ 'ಕುಂದಕುಂದ ಆಚಾರ್ಯರ ಅನ್ವಯ'ಎಂದು ಅರ್ಥವಾಗುವು ದಲ್ಲದೆ ಸರ್ವಥಾ 'ಕುಂದಕುಂದಪುರಾನ್ವಯ' ಎಂದಾಗುವುದಿಲ್ಲ. ಇದಲ್ಲದೆ ಶ್ರೀ ನಾಥೂರಾಂ ಪ್ರೇಮಿಯವರು ತಮ್ಮ ಅಭಿಪ್ರಾಯದ ಪೋಷಕವಾಗಿ ಕೊಟ್ಟಿರುವ 'ಶ್ರೀಪುರಾನ್ವಯ, ಅರುಗಲಾನ್ವಯ, ಕಿತ್ತೂರಾನ್ವಯ ಮಾಥುರಾನ್ವಾಯ'ಗಳು ಸ್ಪಷ್ಟ ವಾಗಿಯೇ ಸ್ಥಳಗಳ ಹೆಸರುಗಳ ಸೂಚಕವಾಗಿದ್ದು ಆ ಸ್ಥಳಗಳಿಗೆ ಸೇರಿದ ಮುನಿ ಸಂಘಗಳ ಅನ್ವಯಗಳ ಸೂಚಕವಾಗಿವೆ. ಆದರೆ ಕುಂದರಿಗೆ ಸ್ಥಳದ (ಕೊಂಡಕುಂದೈ) ಹೆಸರೇ ಅನ್ವಿತವಗಿದ್ದು ರೂಢಿಗತವಾಗಿ ಉಳಿದು ಬಂದಿದೆಯೆಂದು ತಿಳಿಯುವುದು ಸೂಕ್ತವಿದೆ. ಇದರಿಂದ ಕುಂದಕುಂದರು ಶಕ ಸಂ. ೪೦೦ರ ಆಸುಪಾಸಿನ ಸಮಯದವ ರಾಗಿದ್ದು ಯತಿ ವೃಷಭರ

ಸಮಕಾಲೀನರಾಗಿರುವರೆಂಬ ಶ್ರೀ ನಾಥಾರಂ ಪ್ರೇಮಿಯವರ ವಾದವು ನಿರಾಧಾರವಾದುದಾಗಿ ನಿಲ್ಲದೆ ಹೋಗುವುದಲ್ಲದೆ, ಈ ಆಚಾರ್ಯರು ಹಿಂದೆ ನಿರೂಪಿಸಿರುವಂತೆ ಕ್ರಿ. ಶ. ಎರಡನೇ ಶತಮಾನದವರಾಗಿರುವರೆಂಬುದು ಖಚಿತವಗಿ ನಿಲ್ಲುವುದು. ಇನ್ನು ಯತಿ ವೃಷಭರ ಕಾಲ ನಿರ್ಣಯದ ಬಗ್ಗೆ ಶ್ರೀ ನಾಥಾರಾಂಪ್ರೇಮಿಯವರು ಮುಂದಿಟ್ಟಿರುವ ಆಧಾರಗಳನ್ನು ಪರಿಶೀಲಿಸ

ಬಾಕಾಗಿದೆ.

ಚೂರ್ಣಿ ಸೂತ್ರಕರ್ತೃ ಯತಿ ವೃಷಭರೇ ತಿಲೋಯಪಣ್ಣತ್ತಿಯ ಕರ್ತೃವೂ ಆಗಿ ದ್ದಾರೆ. ಮತ್ತು ತಿಲೋಯಪಣ್ಣತ್ತಿಯಲ್ಲಿ ಭ. ಮಹಾವೀರನ ನಿರ್ವಾಣಾನಂತರದ ೧೦೦೦ ವರ್ಷಗಳ ಅನಂತರದಲ್ಲಿ ಜೀವಿಸಿದ್ದ ಕಲ್ಕಿಯ ವಿಷಯವನ್ನು ಹೇಳಿದೆಯಾದ್ದರಿಂದ ಈ ಕೃತಿಯ ಕೃರ್ತ ಯತಿ ವೃಷಭರೂ ಇದೇ ಸಮಯದಲ್ಲಿ ಜೀವಿಸಿದ್ದರೆಂಬುದು ಮಾನ್ಯ ನಾಥಾರಾಂ ಪ್ರೇಮಿಯವರ ಅಭಿಪ್ರಾಯವಾಗಿದೆಯಲ್ಲದೆ ಕಸಾಯ ಪಾಹುಡ ಪ್ರಸ್ತಾವನಾಕಾರರ ಅಭಿಪ್ರಾಯವೂ ಆಗಿದೆ. ಇದರಿಂದ ಷಟ್ ಖಂಡಾಗಮ ಮತ್ತು ಕಸಾಯಪಾಹುಡ ಆಗಮ ವ್ಯಾಖ್ಯಾನಗಳ ಐತಿಹ್ಯದ ಕೆಲವು ಪ್ರಮುಖ ಅಂಶಗಳು ಸಂದಿಗ್ಧತೆಗೊಳಪಡುತ್ತವೆ. ಚೂರ್ಣಿಸೂತ್ರಕಾರ ಯತಿವೃಷಭರೇ ತಿಲೋಯ ಪಣ್ಣತ್ತಿಯ ಕರ್ತೃವೂ ಆಗಿದ್ದಾರೆ ಎಂಬುದರ ಪ್ರತಿಪಾದನೆಗಾಗಿ ಮಾನ್ಯ ನಾಥೂರಾಂ ಪ್ರೇಮಿಯವರು ತಿಲೋಯಪಣ್ಣತ್ತಿಯ ಮುಂದಿನ ಗಾಹೆಗಳನ್ನು ಉಲ್ಲೇಕಿಸಿದ್ದಾರೆ.

ಪಣಮಹ ಜಿಣ ವರವಸಹಂ ಗಣವರವಸಹಂ ತಹೇವ ಗುಣವಸಹಂ ।
ದಟ್ಠೂಣ ಯ ರಿಸಿವಸಹಃ ಜದಿವಸಹಂ ಧಮ್ಮಸುತ್ತಪಾಠಏ ವಸಹಂ ॥ ೫೦ ॥

ಚುಣ್ಣಿಸರೂಪ ಛಕ್ಕರಣ ಸರೂವ ಪಮಾಣ ಹೋದಿ ಕಿಂ–ಜಂ ತಂ ।
ಅಟ್ಠಸಹಸ್ಸಪಮಾಣಂ ತಿಲೋಯಪಣ್ಣತ್ತಿಣಾಮಾಏ ॥ ೫೧ ॥

ಏವಂ ಆಯರಿಯ ಪರಂಪರಾಗಏ ತಿಲೋಯ ಪಣ್ಣತ್ತೀಏ ಸಿದ್ಧಲೋಯ ಸರೂವ ನಿರೂವಣ ಪಣ್ಣತ್ತೀ ಮಹಾಹಿಯಾರೋ ಸಮ್ಮತ್ತೋ

ಮೇಲಿನ ಮೊದಲ ಗಾಹೆಯೊಡನೆ, ಸ್ವಲ್ಪ ಮಾತ್ರ ವ್ಯತ್ಯಾಸವುಳ್ಳ, ಸಮಾನತರವಾದ ಜಯಧವಲಾದ ಸಮ್ಯಕ್ತ್ವ ಅನುಯೋಗದ್ವಾರದ ಪ್ರಾರಂಭದ ಮಂಗಲಾ ಚರಣ ರೂಪದಲ್ಲಿರುವ, ಗಾಹೆಯನ್ನು ಕಸಾಯಪಾಹುಡದ (ಭಾಗ ೧–ಪು. ೩೯) ಪ್ರಶ್ತಾವನಾ ಕಾರರು ಉಲ್ಲೇಖಿಸಿದ್ದಾರೆ. ಅದು ಮುಂದಿನಂತಿದೆ :

ಪಣಮಹಜಿಣವರಸಹಂ ಗಣಹರವಸಹಂ ತಹೇವ ಗುಣಹರವಸಹಂ ।

ದುಸಹಪರೀಸಹವೀಸಹಂ ಜಿಣವಸಹಂ ಧಮ್ಮ ಸುತ್ತ ಪಾಢರ ವಸಹಂ ॥

ಮೇಲಿನ ಮೊದಲ ಗಾಹೆಯಲ್ಲಿ ಜಿನವರ ವೃಷಭ, ಗಣಧರ ವೃಷಭ, ಗುಣ (ಧರ) ವೃಶಭ, ಋಶಿ ವೃಷಭ ಮತ್ತು ಯತಿ ವೃಷಭರಿಗೆ ನಮಸ್ಕಾರ ಮಾಡಬೇಕೆಂದು ಹೇಳಿದೆ. ಅದರ ಅನಂತರದ ಗಾಹೆಯಲ್ಲಿ 'ಚೂರ್ಣಿ ಸಮಾನವಾಗಿ ಮತ್ತು ಛಕ್ಕರಣ ಸಮಾನವಾಗಿ ತಿಲೋಯ ಪಣ್ಣತ್ತಿಯ (ಪ್ರಮಾಣವು) ಎಂಟು ಸಹಸ್ರ ಶ್ಲೋಕ ಪ್ರಮಾಣವಿದೆ ಎಂದು ಹೇಳಿದೆ.ಈ ಹೇಳಿಕೆಯಾಧಾರದಿಂದ ಚೂರ್ಣಿಸೂತ್ರಕರ್ತೃವೇತಿಲೋಯ ಪಣ್ಣತ್ತಿಯ ಕರ್ತೃವೂ ಆಗಿದ್ದಾರೆ ಎಂದು ನಿರೂಪಿಸಿದ್ದಾರೆ. ಇದಲ್ಲದೆ, ಈ ತಿಲೋಯಪಣ್ಣತ್ತಿಯಲ್ಲಿ, ಶಕ, ಸಂ. ೩೮೦(ವಿ. ಸಂ. ೫೧೫=೪೫೮)ರಲ್ಲಿ ಸರ್ವ ನಂದಿಯವರಿಂದ ರಚಿತವಾಗಿರುವ ಲೋಕವಿಭಾಗದ(ಲೋಯವಿಭಾಗದ) ಉಲ್ಲೇಖ ವಿರುವುದರಿಂದ ಹಾಗೂ ಭ. ಮಹಾವೀರನ ನಿರ್ವಾಣಾನಂತರದ ೧೦೦೦ ವರ್ಷಗಳ (ಇಸ್ವಿ೪೭೩ರ ಶಕ ಸಂ.೫೫೧ರ) ಅನಂತರದ ಸಮಯದಲ್ಲಿ ಕಲ್ಕಿರಾಜನ ರಾಜ್ಯಭಾರ ಸಂಗತಿಯನ್ನು ಹೇಳಿರುವುದರಿಂದ ಈ ಗ್ರಂಥದ ರಚನಕಾರ ಯತಿ ವೃಷಭರು ಈ ಕಲ್ಕಿರಾಜನ ಸಕಾಲೀನರಾಗಿದ್ದರೆಂದು ಮತ್ತು ಇವರಿಂದ ಶಕ ಸಂ. ೪೦೦(ಇಸ್ವಿ ೪೭೮ರ) ಸರಿಸುಮಾರಿನಲ್ಲಿ ತಿಲೋಯಪಣ್ಣತ್ತಿ ರಚಿತವಾಗಿದೆಯೆಂದು ನಿರೂಪಿಸಿರುವುದನ್ನು ಮತ್ತು ಪದ್ಮನಂದಿ ಕುಂದಕುಂದರೂ ಈ ಯತಿವೃಷಭರ ಸಮಕಾಲೀನರಾಗಿದ್ದು ಶಕ ಸಂ.೪೦೦ರ ಸಮಯದಲ್ಲಿದ್ದರೆಂದು ನಿರೂಪಿಸಿರುವ ಸಂಗತಿಯನ್ನು ಹಿಂದೆ ಕುಂದಕುಂದಸ್ವಾಮಿಯವರ ಇತಿವೃತ್ತ ಪ್ರಸಂಗದಲ್ಲಿ ಪ್ರಸ್ತಾವಿಸಿ ಅದರಬಗ್ಗೆ ಪರ್ಯಾಲೋಚನೆ ಮಾಡಿ ಕುಂದಕುಂದಾಚಾರ್ಯರ ಕಾಲದ ಬಗ್ಗೆ ಹಿಂದಿನ ನಿರ್ಣಯ ವನ್ನೇ ಧೃಡಿಕರಿಸಲಾಗಿದೆ. ಕಸಾಯಪಾಹುಡ ಪ್ರಸ್ತಾವನಕಾರರು, ಯತಿ ವೃಷಭರ ಕಾಲದ ಬಗ್ಗೆ ಮಾನ್ಯ ನಾಥೂರಾಂ

ಪ್ರೇಮಿಯವರ ಅಭಿಮತವನ್ನು ಪುರಸ್ಕರಿಸಿ ಇವರ ಕಾಲವನ್ನು ವಿ.ಸಂ. ೫೫೦ ಮತ್ತು ೬೫೦ರ ಮಧ್ಯವರ್ತಿಯಾಗಿರುವುದೆಂಬ ಅಭಿಮತ ವುಳ್ಳವರಾಗಿದ್ದಾರೆ (ಪು.೫೭) ಆದರೆ ಇವರ ಅಭಿಮತದಂತೆ ಕುಂದಕುಂದಸ್ವಾಮಿ ಯವರ ಕಾಲ ಮಾತ್ರ ವಿಕ್ರಮ ಶಕೆ ಮೂರನೇ ಶತಮಾನಕ್ಕಿಂತಲೂ ಹಿಂದಿನದಾಗಿದೆ. (ಪು.೬೧) ಇದರಿಂದಾಗಿ, ಷಟ್ಖಂಡಾಗಮ ಮತ್ತು ಕಸಾಯಪಾಹುಡ, ಈ ಎರಡೂ ಆಗಮಗಳ ವ್ಯಾಖ್ಯಾನ ಕರ್ತೃಗಳ ಅನುಕ್ರಮದ ಬಗ್ಗೆ ಇಂದ್ರನಂದಿ ಶ್ರುತಾವತಾರದಲ್ಲಿ ಹೇಳಿರುವ ಇತಿವೃತ್ತದ ಸತ್ಯನಿಷ್ಠೆಯು ಪ್ರಶ್ನಾಯತ್ತವಾಗಿ ಸಂದಿಗ್ದತೆಗೊಳಗಾಗು ವುದು. ಕುಂದಕುಂದಸ್ವಾಮಿಯವರು ಷಟ್ಖಂಡಾಮದ ಮೊದಲ ಮೂರು ಖಂಡ ಗಳಿಗೆ 'ಪರಿಕರ್ಮ' ಎಂಬ ವ್ಯಾಖ್ಯಾನ ಬರೆದಿರುವರೆಂಬ ಇಂದ್ರನಂದಿಯವರ ಹೇಳಿಕೆ ಯನ್ನು ಕ.ಪಾ. ಪ್ರಸ್ತಾವನಾಕಾರರು ಒಪ್ಪದಿರುವುದನ್ನು ಹಿಂದೆ ಪ್ರಸ್ತಾವಿಸಿ ಪರಿಷ್ಕರಿಸ ಲಾಗಿದೆ. ಆದರೆ ಗುಣಧರರು, ಯತಿ ವೃಷಭರು ಮತ್ತು ಉಚ್ಚಾರಣಾರ್ಯರಿಂದ ಅನುಕ್ರಮವಾಗಿ ರಚಿತವಾದ ಕಸಾಯಪಾಹುಡ, ಗಾಥಾ ಸೂತ್ರ, ಚೂರ್ಣಿವೃತ್ತಿಸೂತ್ರ ಮತ್ತು ಉಚ್ಚಾರಣಾವೃತ್ತಿಗಳಿಂದ ಉಪಸಂಹೃತವಾದ 'ಕಸಾಯಪಾಹುಡ' ದ್ವಿತಿಯ ಆಗಮವು ಗುರುಪರಿಪಾಟಿಯಿಂದ ಕುಂದಕುಂದಪುರದಲ್ಲಿ ಪದ್ಮನಂದಿಯವರಿಗೆ ಉಪ ಲಬ್ದವಾಯಿತು ಎಂಬ ಇಂದ್ರನಂದಿಯವರ ಹೇಳಿಕೆಯನ್ನು ಕ. ಪಾ. ಪ್ರಸ್ತಾವನಾ ಕಾರರು ಒಪ್ಪದೆ, ಗುಣಧರ ರಚಿತ ಕಸಾಯ ಪಾಹುಡ ಗಾಥಾಸೂತ್ರಗಳು ಮಾತ್ರ ಕುಂದಕುಂದ ಪದ್ಮನಂದಿಯವರಿಗೆ ದೊರಕಿರಬಹುದೆಂಬ ಅಭಿಮತ ಹೊಂದಿದ್ದಾರೆ. (ಪು.೬೩). ಇನ್ನು ಕುಂದಕುಂದಸ್ವಾಮಿಯವರ ತರುವಾಯ ಶ್ಯಾಮಕುಂದ ಮತ್ತು ತುಂಬಲೂರು ಆಚಾರ್ಯರು ಷಟ್ಖಂಡಾಗಮದ ಐದು ಖಂಡಗಳಿಗೆ ಮತ್ತು ಚೂರ್ಣಿ ವೃತ್ತಿ ಹಾಗೂ ಉಚ್ಚಾರಣಾ ವೃತ್ತಿಸಹಿತವಾದ ಕಸಾಯ ಪಾಹುಡ ದ್ವಿತಿಯ ಆಗಮಕ್ಕೆ ವ್ಯಾಖ್ಯಾನ ಮಾಡಿದರೆಂಬ ಇಂದ್ರನಂದಿಯವರ ಹೇಳಿಕೆಯ ಯಥಾರ್ಥತೆಯ ಬಗ್ಗೆ ಮಾತ್ರವಲ್ಲದೆ ಷಟ್ಖಂಡಾಗಮಕ್ಕೆ ಸಮಂತಭದ್ರರು ವ್ಯಾಖ್ಯಾನ ರಚಿಸಿದರೆಂಬುದರ ಯಥಾರ್ಥೆಯ ಬಗ್ಗೆಯೂ ಕ. ಪಾ. ಪ್ರಸ್ತಾವನಕಾರರು ಸಂಶಯ ವ್ಯಕ್ತಪಡಿಸಿದ್ದಾರೆ. ಕ.ಪಾ. ಪ್ರಸ್ತಾವನೆಯಲ್ಲಿ ಮೊದಲಿಗೆ ಶ್ರುತಾವತಾರದ ಹೇಳಿಕೆಯನ್ನಾಧರಿಸಿ ದ್ವಿತೀಯ ಆಗಮಕ್ಕೆ "ಶ್ಯಾಮಕುಂದರು ಪದ್ದತಿ ಎಂಬ ಟೀಕೆಯನ್ನು ಮತ್ತು ತುಂಬಲೂ ರಾಚಾರ್ಯರು 'ಚೂಡಾಮಣಿ' ಎಂಬ ವ್ಯಾಖ್ಯಾನ ರಚಿಸಿದರು"

ಎಂದು ಹೇಳಿದ್ದಾರೆ. (ಪು.೧೦, ಮತ್ತು ೧೨). ಆದರೆ ಮುಂದೆ"ಅನ್ಯವ್ಯಾಖ್ಯಾಪ" ಎಂಬ ಪ್ರಸಂಗದಲ್ಲಿ ಈ ವ್ಯಾಖ್ಯಾನಗಳ ವಾಸ್ತವಿಕತೆಯ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದಾರೆ.(ಪು.೧೫). ಮುಂದೆ "ಇಂದ್ರನಂದಿಯವರು ತಮ್ಮ ಶ್ರುತಾವತಾರದಲ್ಲಿ ಕಷಾಯ ಪ್ರಾಭೃತವು ಚೂರ್ಣಿಸೂತ್ರ ಮತ್ತು ಉಚ್ಚಾರಣಾವೃತ್ತಿಗಳೊಡನೆ ಉಪಸಂಹೃತವಾದ ಬಳಿಕ ಅದು ಕುಂದಕುಂದಪುರದಲ್ಲಿ ಪದ್ಮನಂದಿಗೆ ಪ್ರಾಪ್ತವಾಯಿತೆಂದು ಹೇಳಿದ್ದಾರೆ ಮತ್ತು ಆ ಬಳಿಕ ಶಾಮಕುಂಡಾಚಾರ್ಯ ತುಂಬುಲೂರಾಚಾರ್ಯ ಮತ್ತು ಸಮಂತಭದ್ರರಿಗೆ ಅದರ ಪ್ರಾಪ್ತವಾಯಿತೆಂದು ಹೇಳಿದ್ದಾರೆ. ಯತಿವೃಷಭರ ಸಮಯವು ವಿಕ್ರಮ ಶಕೆ ಆರನೇ ಶತಮಾನವೆಂದು ಒಪ್ಪಿಕೊಳ್ಳುವುದಾದಲ್ಲಿ (ಶಾಮಕುಂಡಾದಿ) ಈ ಆಚಾರ್ಯಸ್‌ರೆಲ್ಲರೂ ಯತಿ ವೃಷಭರ ಅನಂತರ ಕಾಲದ ವಿದ್ವಾಂಸರೆಂಬುವುದಾಗಿ ಇದನ್ನು ಮಾನ್ಯಮಾಡಲಾಗುವುದಿಲ್ಲ (ಪು.೫೭). ಆಚಾರ್ಯ ಇಂದ್ರನಂದಿಯವರು ಕುಂದ ಕುಂದರ ಬಳಿಕ ಶಾಮಕುಂಡಾಚಾರ್ಯ, ತುಂಬಲೂರಾಚಾರ್ಯ ಮತ್ತು ಆಚಾರ್ಯ ಸಮಂತಭದ್ರರಿಗೆ ದ್ವಿವಿಧಸಿಧ್ಧಾಂತದ ಪ್ರಾಪ್ತಿಯಾಯಿತೆಂದು ಹೇಳಿದ್ದಾರೆ. ಹಾಗೆಯೇ ಇವರಲ್ಲಿ ಮೊದಲಿನಿಬ್ಬರು ಆಚಾರ್ಯರು ಕಷಾಯ ಪ್ರಾಭೃತದ ಮೇಲೆ ಟೀಕೆಗಳನ್ನು ಬರೆದರೆಂದೂ ಕಾಣಿಸಿದ್ದಾರೆ. ಈ ಟೀಕೆಗಳ ವಿಷಯದಲ್ಲಿ ನಾವು ಮುಂಚಿತವಾಗಿ ಪ್ರಕಾಶ ಬೀರಿದ್ದೇವೆ. ಆಚಾರ್ಯ ಕುಂದಕುಂದರ ಹಾಗೆ ಯಾವ ಸಿದ್ಧಾಂತದ ಮೇಲಾಗಲಿ ಸಮಂತಭದ್ರರ ಯಾವುದೇ ಟೀಕೆಯಾಗಲಿ ಉಪಲಬ್ಧವಿಲ್ಲ ಮತ್ತು ಅದು ಇದ್ದಿತೆಂಬುದು ಬೇರೆಯದಾದ ಯಾವುದೇ ಆಧಾರದಿಂದ ಸಮರ್ಥಿತವಾಗು ವುದಿಲ್ಲ.ಅಲ್ಲದೆ ಸಮಂತಭದ್ರರನ್ನು ಶಾಮಕುಂಡಾಚಾರ್ಯ ಮತ್ತು ತುಂಬಲೂರಾ ಚಾರ್ಯರ ಅನಂತರ ಕಾಲದ ವಿದ್ವಾಂಸರೆನ್ನು ಪರಿಗಣನೆ ಮಾಡೂವುದೂ ಯುಕ್ತಿ ಯುಕ್ತವಾಗುದಿಲ್ಲ. ಆದ್ದರಿಂದ ಎಲ್ಲಿಯವರೆಗೆ ಈ ಆಚಾರ್ಯರ, ಪೌರ್ವಾ ಪರ್ಯವು, ಮೇಲೆ ಹೇಳಿರುವ ಪ್ರಕಾರ ಸರಿಯಾದುದಾಗಿದೆಯೆಂದು ಮತ್ತು ಇವರ ಸಮ್ಮುಖದಲ್ಲಿ ಯತಿ ವೃಷಭರ ಚೂರ್ಣಿಸೂತ್ರ ಇದ್ದಿತೆಂದು ಸಿದ್ಧವಾಗುವುದಿಲ್ಲವೋ ಅಲ್ಲಿಯವರೆಗೆ ಈ ಆಚಾರ್ಯರನ್ನು ಕುರಿತ ಹೇಳಿಕೆ ಹಾಗೂ ಮೇಲೆ ಹೇಳಿದ ಯತಿ ವೃಷಭರ ಸಮಯವೂ ಬಾಧಿತವಾಗುವುದಿಲ್ಲ ಮತ್ತು ಇವರಿಗಿಂತ ಮುಂಚಿತವಾಗಿ ವಿಕ್ರಮ ಶಕೆ ಆರನೇ ಶತಮಾನದ ಉತ್ತರಾರ್ಧವೆಂದು ಗಣನೆ ಮಾಡುವಲ್ಲಿ ಯಾವ ಭಾಧೆಯೂ ದೃಷ್ಟಿ

ಗೋಚರವಾಗುವುದಿಲ್ಲ ಮತ್ತು ಇವರಿಗಿಂತ ಮುಂಚಿತವಾಗಿ ಕಸಾಯ ಪಾಹುಡದ ಮೇಲೆ ಬೇರೆ ಯಾವ ವೃತ್ತಿಯಾಗಲಿ ಇದ್ದುದರ ಬಗ್ಗೆ ಯಾವ ಉಲ್ಲೇಖವೂ ಇಲ್ಲವಾಗಿರುವೆವೋ ಅವೆಲ್ಲವೂ ವಿಕ್ರಮ ಶಕೆ ಆರನೇ ಶತಮಾನದ ಅನಂತರ ಕಾಲದ ರಚನೆಗಳೇ ಆಗಿವೆ.

ಯತಿ ವೃಷಭರು ವಿ. ಶಕೆ ೫೫೦ ಮತ್ತು ೬೫೦ರ ಮಧ್ಯವರ್ತಿಕಾಲದಲ್ಲಿ ಜೀವಿಸಿದ್ದ ರೆಂಬ ತಮ್ಮ ಅಭಿಪ್ರಾಯದ ಸಮರ್ಥನೆ ಮಾಡುವಲ್ಲಿ ಕ. ಪಾಹುಡ ಪ್ರಸ್ತಾವನಾಕಾರ ರಿಗೆ, ಇಂದ್ರನಂದಿಯವರು ಶ್ರುತಾವತಾರದಲ್ಲಿ ಹೇಳಿರುವ ಶ್ಯಾಮಕುಂಡರು ತುಂಬ ಲೂರಾಚಾರ್ಯರುಗಳಿಂದ (ಚೂರ್ಣಿವೃತ್ತಿ ಸಹಿತವಾದ) ಕ. ಪಾಹುಡಕ್ಕೆ ವ್ಯಾಖ್ಯಾನ ರಚನೆಯಾಯಿತೆಂಬ ಸಂಗತಿ ಹಾಗೂ ತುಂಬಲೂರಾಚಾರ್ಯರ ಬಳಿಕ ಸಮಂತಭದ್ರ ರಾಗಿರುವರೆಂಬ ಅನುಕ್ರಮದ ಸಂಗತಿಗಳು ತೊಡಕಾಗಿ ಪರಿಣಮಿಸಿದುವು. ಇದರಿಂದಾಗಿ ಶ್ಯಾಮಕುಂಡರು ಮತ್ತು ತುಂಬಲೂರಾಚಾರ್ಯರಿಂದ ಯತಿವೃಷಭರ ಅನಂತರ (ವಿ. ಸಂ. ೫೫೦ ಮತ್ತು ೬೫೦ ತರುವಾಯ) ಕಾಲದಲ್ಲಿ ವ್ಯಾಖ್ಯಾನ ರಚನೆ ಯಾಗಿರುವುದರ ಸಂಭಾವ್ಯತೆಯನ್ನು ಒಪ್ಪಿರುವಾದರೂ (ಕ. ಪಾ. ಪ್ರಸ್ತವನಾ ಪು. ೧೨ ಮತ್ತು ೧೪) ತುಂಬಲೂರಾಚಾರ್ಯರ ಅನಂತರ ಕಾಲದಲ್ಲಿ ಸಮಂತ ಭದ್ರ ಸ್ವಾಮಿಯವರು ಆಗಿರುವರೆಂಬುದನ್ನು ಒಪ್ಪಬೇಕಾಗಿ ಬಂದುದು ಈ ಪ್ರಸ್ತಾವನಾ ಕಾರರಿಗೆ ದೊಡ್ಡ ತೊಡಕಾಗಿ ಪರಿಣಮಿಸಿದೆ. ಈ ಕಾರಣದಿಂದ ಇವರಿಂದ ವ್ಯಾಖ್ಯಾನ ರಚನೆಯಾಗಿದೆ ಎಂಬ ಐತಿಹ್ಯದ ಯಥಾರ್ಥತೆಯನ್ನೇ ಪ್ರಶ್ನಿಸಿ ನಿರಾಕರಿಸಿರುವುದು ಮೇಲಿನ ಉಲ್ಲೇಖದಿಂದ ಸ್ಪಷ್ಟವಾಗುವುದು. ಪ್ರಸಕ್ತಪ್ರಸಂಗದಲ್ಲಿ ಚೂರ್ಣಿವೃತ್ತಿ ಕ್ಕರ್ತೃ ಯತಿ ವ್‌ರ್ಯ್ಷಭರೇ ತಿಲೋಯಪಣ್ಣತ್ತಿಯ ಕರ್ತೃವೂ ಆಗಿದ್ದಾರೆ ಮತ್ತು ಇವರು ವಿಕ್ರಮ ಶಕೆ ೬ನೇ ಶತಮಾನದ(ಕ್ರಿ. ಶ. ೫ನೇ ಶತಮಾನ)ದಲ್ಲಿ ಜೀವಿಸಿದ್ದರೆಂಬ ಮೇಲಿನ ಪ್ರತಿಪಾದನೆಯ ಸಾಧುತ್ವವನ್ನು ಪರಾಮರ್ಶೆ ಮಾಡಬೇಕಾಗಿದೆ.

ಇಂದ್ರನಂದಿಯವರ ಶ್ರುತಾವತಾರದಲ್ಲಿ ಪ್ರಸ್ತುತವಿರುವ ಸಂಗತಿಗಳನ್ನು ಪ್ರಬಲ ಆಧಾರಗಳ ಹೊರತಾಗಿ ನಿರಾಕರಿಸುವುದು ಯುಕ್ತವಲ್ಲ. ಶ್ರುತಾವತಾರದ ರಚನೆ ಮಾಡುವಲ್ಲಿ ಇವರು ಪರಂಪರೆಯಿಂದ ಬಂದ ಅನುಶ್ರುತಿಯ ಪರಿಶೀಲನೆ ಯೊಡನೆಯೇ ವಿಷಯ ಪ್ರರೂಪಣೆ

ಮಾಡಿರುವರೆಂದು  ಹೇಳಬಹುದಾಗಿದೆ. ಈ ಬಗ್ಗೆ ಷಟ್ ಖಂಡಾಗಮ–ಧವಲಾ ಸಂಪಾದಕರಾದ ಮಾನ್ಯ ಪ್ರೊ. ಹೀರಾಲಾಲ್ ಜೈನ್ ಅವರ ಹೇಳಿಕೆಯನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವಿದೆ–

"ಇಂದ್ರನಂದಿಯವರ ಪ್ರಾಮಾಣಿಕತೆ–ಇಂದ್ರನಂದಿ ಮತ್ತು ವಿಬುಧಶ್ರೀಧರರು ತಮ್ಮ ತಮ್ಮ 'ಶುತ್ವತಾರ' ಕಥನಗಳಲ್ಲಿ ಷಟ್ ಖಂಡಾಗಮದ ರಚನೆ ಹಾಗೂ  ಧವಲಾದಿ ಟೀಕೆಗಳ ನಿರ್ಮಾಣದವಿವರಣೆ ಕೊಟ್ಟಿದ್ದಾರೆ. ವಿಬುಧ ಶ್ರೀಧರನ ಕತಾನಕವು ಬಃವಂಶ ಕಾಲ್ಪನಿಕವಿದೆ ... ಇಂದ್ರನಂದಿಯವರು ವೀರಸೇನರ ಬಗ್ಗೆ ಹಾಗೂ ಧವಲಾ ರಚನೆಯ ಇತಿಹಾಸದ ಬಗ್ಗೆ ಹೇಳಿರುವುದನ್ನು ಪರಿಶೀಲಿಸಿದಲ್ಲಿ ಅವರಿಗೆ ಈ ಸಂಗತಿಗಳ ಸನ್ನಿಹಿತ ಪರಿಚಯವಿದ್ದಿತೆಂದು ಹೇಳಬಹುದಾಗಿದೆ. ವೀರ ಸೇನರ ಗುರು ಇದ್ದ ಸ್ಥಳ ಅವರ ಬಳಿ ವೀರಸೇನರು ಸಿದ್ಧಾಂತದ ಅಧ್ಯಯನ ಮಾಡಿ ಎಲ್ಲೆಲ್ಲಿ ಹೋಗಿ, ಯಾವ ಬಸದಿಯಲ್ಲಿ ಕುಳಿತು, ಯಾವ ಗ್ರಂಥಗಳನ್ನು ಎದುರಿ ನಲ್ಲಿರಿಸಿಕೊಂಡು ತಮ್ಮ ಟೀಕೆ ರಚಿಸಿದರು ಎಂದು ಮುಂತಾದುದನ್ನು ಉತ್ತಮ ರೀತಿಯಿಂದ ಹೇಳಿರುವರು, ಇದರಲ್ಲಿ ಕಲ್ಪನೆ ಅಥವಾ ಕೃತ್ರಿಮತೆ ದೃಷ್ಟಿಗೋಚರವಾಗು ವುದಿಲ್ಲ. ಅದರ ಬದಲಾಗಿ ಪ್ರಾಮಾಣಿಕ ಇತಿಹಾಸವು ಗೋಚರಿಸುತ್ತದೆ... ಅವರು ತಾವು ಕೇಳಿದ ಕೇಳಿಸಿಕೊಂಡ ಯಾವ ವಾರ್ತೆ, ಕಿಂವದಂತಿಗಳ ಆಧಾರದಿಂದ ಬರೆದಿರು ವರೋ ಅದನ್ನು ವ್ಯವಸ್ಥಿತಗೊಳಿಸಿ ಯಥಾಶಕ್ತಿ ಶೋಧನೆ ಮಾಡಿ ಅನುಸಂಧಾನ ಪೂರ್ವಕ ಬರೆದಿದ್ದಾರೆ. ಇವರು ಹೇಳಿರುವ ಕೆಲವೊಂದು ಸಂಗತಿಗಳು ಧವಲಾ ದಲ್ಲಿಯೂ ವ್ಯವಸ್ಥಿತ ರೂಪದಿಂದ ದೊರೆಯುವುದಿಲ್ಲ. ಇದಕ್ಕೆ ಧವಲಾ ಟೀಕೆಗಿಂತ ಮುಂಚಿನವುಗಳಾದ ಟೀಕೆಗಳು ಮತ್ತು ಟೀಕಾಕಾರರ ಸಂಗತಿಗಳನ್ನು ಉದಾಹರಣೆ ಯಾಗಿ ಕಾಣಬಹುದು ಇವರು ಎಂತಹ ಪ್ರಾಮಾಣಿಕರು ನಿರ್ಭೀಕರು ಮತ್ತು ತಮ್ಮ ಅಶಕ್ತತೆಯನ್ನು ಸ್ವೀಕರಿಸುವ ಪಕ್ಷಪಾತವಿಲ್ಲದ ಇತಿಹಾಸ ವಕ್ತೃಗಳೆಂಬುದಕ್ಕೆ ಅವರದೇ ಒಂದು ಮಾತನ್ನು ಸಾಕ್ಷಿಯಾಗಿ ಕಾಣಬಹುದು : 'ಗುಣಧರರ ಮತ್ತು ಧರಸೇನರ ಗುರುಪರಂಪರೆ ಪೂರ್ವಾನ್ವಯವು ಅದನ್ನು ನಿರೂಪಿಸುವ ಆಗಮ ಅಥವಾ ವೃದ್ಧ ಮಿನಿಜನರು ಇಲ್ಲವಾದ ಕಾರಣದಿಂದ ನಮಗೆ ತಿಳಿದಿಲ್ಲ' ಎಂದು ಸ್ಪಷ್ಟವಾಗಿ ಹೇಳಿ ದ್ದಾರೆ. ಈ ತಮ್ಮ ಈ ಆಜ್ಞಾನದ ಸ್ವೀಕೃತಿಯಲ್ಲಿ ಇವರ ಸ್ಪಷ್ಟವಾದಿತ್ವ ಸಾಹಿತ್ಯಕಸತ್ಯಪರತೆ ಮತ್ತು ನೈತಿಕ ಬಲ ಎಷ್ಟಿದೆ

? (ಎಂಬುದನ್ನು ಗುರುತಿಸಬಹುದು) ಈ ವಾಕ್ಯಗಳನ್ನು ಬರೆದಿರುವವರ ಪ್ರಾಮಾಣಿಕತೆಯಲ್ಲಿ ಸಹಜವಾಗಿ ಅವಿಶ್ವಾಸ ಹೊಂದ ಬಹುದೇನು ? (ಷಟ್ ಖಂಡಾಗಮ–ಪುಸ್ತಕ ೨, ಪು. ೨೨, ೨೩).

ಇಂದ್ರನಂದಿಯವರ ಶ್ರುತಾವತಾರದ ಹೇಳಿಕೆಯ ಐತಿಹಾಸಿಕತೆಯನ್ನು ಅದರ ವಿರುದ್ಧವಾದ ಪ್ರಬಲ ಆಧಾರಗಳಲ್ಲದೆ ನಿರಾಕರಿಸಲಾಗುವುದಿಲ್ಲವೆಂದು ಈ ಮೇಲಿನ ಹೇಳಿಕೆಯಿಂದ ತಿಳಿಯಬಹುದಾಗಿದೆ. ಕ. ಪಾ. ಪ್ರಸ್ತಾವನಾಕಾರರು ಯತಿ ವೃಷಭರು ವಿ. ಶಕೆ ೬ನೇ ಶತಮಾನದವರು ಎಂಬುದಾದ ತಮ್ಮ ಅಭಿಮತವನ್ನು ನಿರೂಪಿಸುವುದಕ್ಕಾಗಿ ಇಂದ್ರನಂದಿಯವರ ಹೇಳಿಕೆಯ ಐತಿಹಾಸಿಕತೆಯನ್ನು ಸುಳ್ಳಾಗಿಸಲು ಯತ್ನಿಸಿದ್ದಾರೆ.

ಹಿಂದೆ ಉಲ್ಲೇಖಿಸಿರುವ ಗಾಹೆಗಳು ತಿಲೋಯಪಣ್ಣತ್ತಿಯ ಮೂಲಕರ್ತೃವಿನ ರಚನೆಗಳೇ ಆಗಿವೆಯೆ ? ಎಂಬ ಸಂದೇಹಕ್ಕೆಡೆ ಇದೆ. ಗಾಹೆಗಳ ಕೊನೆಗೆ ಉಳ್ಳೇಖಿ ಸಿರುವ ಅಧಿಕಾರ ಸಮಾಪ್ತಿವಾಕ್ಯದಲ್ಲಿ "ಈ ರೀತಿಯಾಗಿ ಪರಂಪರಾಗತವಾಗಿ ಬಂದ ತಿಲೋಯಪಣ್ಣತ್ತಿಯಲ್ಲಿ" ಎಂದು ಹೇಳಿದೆಯಾಗಿ ಈ ವಾಕ್ಯವು ತಿಲೋಯ ಪಣ್ಣತ್ತ್ಯ ಮೂಲಕರ್ತೃವಿನದಾಗಿರಲು ಸಾಧ್ಯವಿಲ್ಲ. ಇದೇ ರೀತಿಯಾಗಿ ಉಲ್ಲೇಖಿಸಿ ರುವ ಇತರ ಗಾಹೆ ಗಳೂ ಕೂಡ ಮೂಲ ಕರ್ತೃವಿನ ರಚನೆಗಳಾಗಿರದೆ ಕಾಲಾಂತರದಲ್ಲಿ ಸಂಯೋಜಿತ ವಾದಂತಹವುಗಳಾಗಿವೆಯೆಂದು ತಿಳಿಯಬಹುದಾಗಿದೆ.

ಯತಿ ವೃಷಭರು ವಿಕ್ರಮ ಶಕೆ ಆರನೇ ಶತಮಾನ ಕಾಲದವರೆಂಬ ಅಭಿಮತದ ಸಾಧುತ್ವವನ್ನು ಈಗ ಪರಿಷ್ಕರಿಸಬೇಕಾಗಿದೆ : ಈಗ ಉಪಲಬ್ಧವಿರುವಂತೆ ತಿಲೋಯ ಪಣ್ಣತ್ತಿಯು ಕಾಲಾಂತರದಲ್ಲಿ ಸಂಯೋಜಿಸಲ್ಪಟ್ಟಿರುವ ಸಾಕಷ್ಟು ವಿಷಯಗಳನ್ನು ಎಂದರೆ ಪ್ರಕ್ಷಿಪ್ತ ಭಾಗಗಳನ್ನೊಳಗೊಂಡಿದೆಯೆಂದು ವಿದ್ವಾಂಸರು ಸಾಕ್ಷೀಕರಿಸಿದ್ದಾರೆ. ಈ ಬಗ್ಗೆ ತಿಲೋಯಪಣ್ಣತ್ತಿಯನ್ನು ಕೂಲಂಕಷವಾಗಿ ಅವಲೋಕಿಸಿ ಸಂಪಾದನ ಕಾರ್ಯ ಮಾಡಿರುವ ಆ. ನೇ. ಉಪಾಧ್ಯೆಯವರ ಒಂದು ಮಾತನ್ನು ಗಮನಿಸ ಬೇಕಾಗಿದೆ. "ಈ ಗ್ರಂಥದ ಪದ್ಯ ೪–೧೨–೧೧ರಲ್ಲಿ ಬಾಲಚಂದ್ರ ಸಿದ್ಧಾಂತಿಕನನ್ನು ಹೆಸರಿಸಿದೆ. ಈ ಗಾಹೆಯೂ ಗ್ರಂಥರಚನಕಾರ ಯತಿ ವೃಷಭರದ್ದಾಗಿದೆಯೇ ಎಂಬುದು ಮೊದಲ ಪ್ರಶ್ನೆ. ಇದಕ್ಕೆ ನನ್ನ ಉತ್ತರ ನಕರಾತ್ಮಕವಾದುದು. ಇಂತಹುದಾದ ಹೆಚ್ಚುವರಿ ಪದ್ಯವು ವಿದ್ಯಾಸಂಪನ್ನ ಓದುಗರು, ಮತ್ತು ನಕಲು

ಪ್ರತಿಕಾರರು ವಿವರಣಾತ್ಮಕವಾದ ಪ್ರಸಂಗಗಳನ್ನು ಅಲ್ಲಲ್ಲಿ ಸೇರಿಸಿರುವ ಸಂಶಯ ಮೂಡಿಸುವುದರ ಪ್ರಬಲ ಸೂಚಕ ವಾಗಿದೆ" (ಪು. ೫). ಸುಪ್ರಸಿದ್ಧ ವಿದ್ವಾಂಸ ನೇಮಿಚಂದ್ರ ಜೈನ ಶಾಸ್ತ್ರೀ ಸಾಹಿತ್ಯ ರತ್ನ, ಆರಾ ಅವರು, ಇದೇ ತಿಲೋಯ ಪಣ್ಣತ್ತಿಯ "ಕೆಲವು ಕರಣ ಸೂತ್ರಗಳಾದರೋಭಾರತೀಯ ಗಣಿತ ಶಾಸ್ತ್ರದನುಸಾರ ಕ್ರಿ. ಶ.(ಇಸ್ವೀ ಸನ್) ಅನೇಕ ಶತಾಬ್ದಿಗಳ ಪೂರ್ವಕಾಲದವುಗಳಾಗಿವೆ, ಮತ್ತು ಕೆಲವು ಶಕ ಸಂ. ಏಳನೇ ಮತ್ತು ಎಂಟನೇ ಶತಾಬ್ದಿಯ ಗಣಿತ ಪರಂಪರೆಗನುಸರಿಸಿ ವಿಕಸಿತ, ಸಂಶೋಧಿತ ಹಾಗೂ ಪರಿವರ್ತಿತ ರೂಪ ಪಡೆದವುಗಳಾಗಿವೆ. ವರ್ತಮಾನ ತಿಲೋಯ ಪಣ್ಣತ್ತಿಯು ವಾಸ್ತವಿಕವಾಗಿ ಒಂದು ಸಂಕಲನ ಗ್ರಂಥವಾಗಿದೆಯೆಂದು ಅವಶ್ಯವಾಗಿ ಹೇಳಲಿಚ್ಛಿಸುತ್ತೇನೆ. ಏಕೆಂದರೆ ಯಾವ ಗಣಿತಜ್ಞನೇ ಆಗಲಿ ಇಷ್ಟೊಂದು ಹೆಚ್ಚಿನದಾದ ವಿಷಮತೆ– ಗಣಿತ ಸಂಬಂಧಿ ಯಾದ ಸೂಕ್ಷ್ಮತೆ ಮತ್ತು ಸ್ಥೂಲತೆಗಳನ್ನು ಒಟ್ಟಿಗೇ ಬರೆಯಲು ಸಾಧ್ಯವಿಲ್ಲ" ಎಂದು ಹೇಳಿದ್ದಾರೆ (–ಜೈನಸಿದ್ಧಾಂತ ಭಾಸ್ಕರ, ಜನವರಿ ೧೯೪೫, ಪು. ೧೧೧೦೭–೮). ಇದೂ ಅಲ್ಲದೆ ಈಗ ಉಪಲಬ್ಧವಿರುವ ತಿಲೋಯಪಣ್ಣತ್ತಿಯು ಕಾಲಾನುಕ್ರಮದಲ್ಲಿ ಸಂಯೋಜಿತವಾಗಿರುವ ಪ್ರಕ್ಷಿಪ್ತ ಪಾಠಗಳನ್ನೊಳಗೊಂಡು ಬೆಳೆದು ಬಂದಿರುವ ಸಂಗತಿಯನ್ನು ಈ ಗ್ರಂಥದ ಪ್ರಸ್ತಾವನೆಯ ಮುಂದಿನ ಹೇಳಿಕೆ ಸ್ಪಷ್ಟಪಡಿಸುತ್ತದೆ.

"ಹಿಂದೆ ಉಲ್ಲೇಖಿಸಿರುವ ತಿಲೋಯಪಣ್ಣತ್ತಿಯು ಗಾಹೆಯಲ್ಲಿ (೫೧ರಲ್ಲಿ) ಈ ಗ್ರಂಥವು ಎಂಟು ಸಾವಿರ ಗ್ರಂಥ(ಶ್ಲೋಕ) ದ್ದೆಂದು ಹೇಳಿದೆ. ಆದರೆ ಈಗ ದೊರೆಯುವ ತಿಲೋಯಪಣ್ಣತ್ತಿಯಲ್ಲಿ ೯೩೪೦ ಶ್ಲೋಕಗಳಿವೆ" (ತಿ. ಪ. ಭಾಗ ೨, ಪ್ರ. ಪು. ೬೫, ಅ. ಟಿ. ೧).

ಈ ಮೇಲಿನ ಹೇಳಿಕೆಗಳು ಈಗ ಉಪಲಬ್ಧವಿರುವ ತಿಲೋಯಪಣ್ಣತ್ತಿಯು ಭಿನ್ನ ಭಿನ್ನ ಕಾಲಗಳಲ್ಲಿ ಸಂಯೋಜಿತವಾಗಿರುವ ಪ್ರಕ್ಷಿಪ್ತ ವಿಷಯಗಳನ್ನೊಳಗೊಂಡಿದೆ ಯೆಂದು ಪ್ರಮಾಣೀಕೃತವಾಗುವುದು. ಆದ್ದರಿಂದ ಈ ಕೃತಿಯಲ್ಲಿ ಹೇಳಲಾಗಿರುವ ಅಂಶಗಳನ್ನಾಧರಿಸಿ ಇದರ ಕರ್ತೃವೆಂದು ಪರಿಗಣನೆ ಮಾಡಲಾಗಿರುವ ಯತಿವೃಷಭರ ಕಾಲನಿರ್ಣಯ ಮಾಡುವುದು ಸುಸಂಗತವಾಗುವುದಿಲ್ಲ. ಮಾನ್ಯ ನಾಥೂರಾಂ ಪ್ರೇಮಿ ಯವರು ಯತಿವೃಷಭರ ಕಾಲನಿರ್ಣಯ ಮಾಡುವಲ್ಲಿ ಮುಖ್ಯವಾಗಿ ಎರಡು ಆಧಾರ ಗಳನ್ನು ಮುಂದಿಟ್ಟಿದ್ದಾರೆ. ಇವೆರಡರಲ್ಲಿ ಮೊದಲನೆಯದು ತಿಲೋಯಪಣ್ಣತ್ತಿಯಲ್ಲಿ ಉಲ್ಲೀಖಿತವಿರುವ 'ಲೋಯವಿಭಾಗ' ಎಂಬ ಹೆಸರಿನ ಗ್ರಂಥ ಮತ್ತು ಎರಡನೆಯದು 'ಕಲ್ಕಿ' ರಾಜನ

ಐತಿಹ್ಯ, ಕುಂದಕುಂದಸ್ವಾಮಿಯವರ ಇತಿವೃತ್ತ ವಿವರಣೆ ಸಂದರ್ಭದಲ್ಲಿ 'ಲೋಯವಿಭಾಗ' ಗ್ರಂಥ ವಿಷಯದ ಪ್ರಸ್ತಾವ ಮಾಡಿದೆ. ಈಗ ಈ ಪ್ರಾಕೃತ ಮೂಲಗ್ರಂಥ ಉಪಲಬ್ಧವಿಲ್ಲ. ಆದರೆ ಇದರ ಸಂಸ್ಕೃತ ಅನುವಾದವೆಂದು ಹೇಳಲಾಗಿ ರುವ ಸುಮಾರು ಕ್ರಿ. ಶ. ಹದಿಮೂರನೇ ಶತಮಾನದಲ್ಲಿ ಸಿಂಹಸೂರಿಯವರಿಂದ ರಚಿತವಾಗಿರುವ 'ಲೋಕವಿಭಾಗ' ಗ್ರಂಥವಿದೆ. ಇದರ ಹೇಳಿಕೆಯ ಆಧಾರದಿಂದ ಮೂಲ ಪ್ರಾಕೃತ 'ಲೋಯವಿಭಾಗವು' ಸರ್ವನಂದಿಯವರಿಂದ ಶಕ ಸಂ.೩೮೦ರಲ್ಲಿ (ಕ್ರಿ.ಶ. ೪೫೮ರಲ್ಲಿ) ರಚಿತವಾಗಿರುವುದೆಂದು ಮಾನ್ಯ ನಾಥೂ ಪ್ರೇಮಿಯವರು ತರ್ಕ ಮಂಡನೆ ಮಾಡಿದ್ದಾರೆ(ಜೈ.ಸಾ ಔರ್ ಇತಿಹಾಸ್ ಪು.೪). ತಿಲೋಯಪಣ್ಣತ್ತಿಯಲ್ಲಿ ಉಲ್ಲೇಖಗೊಂಡಿರುವ ಆಕರ ಗ್ರಂಥಗಳಲ್ಲಿ ಒಂದೆನಿಸಿದ 'ಲೋಯವಿಭಾಗ'ವನ್ನು ಮಾನ್ಯ ಆ.ನೇ. ಉಪಾಧ್ಯೆಯವರು ಹೆಸರಿಸಿ ಈ ಆಧಾರದಿಂದ ತಿಲೋಯಪಣ್ಣತ್ತಿ ಕರ್ತೃ ಯತಿವೃಷಭರು ಶಕ.ಸಂ. ೩೮೦ರಿಂದ (ಕ್ರಿ. ಶ ೪೫೮ರಿಂದ ಈಚಿನ ಕಾಲದವರು) ಎಂದೂ ಹೇಳಿದ್ದಾರೆ (ತಿಲೋಯಪಣ್ಣತ್ತಿ ಭಾಗ೨,ಪ್ರಸ್ತಾವನಾಪು. ೬). ಆದರೆ ಕ.ಪಾ. ಪ್ರಸ್ತಾವನಕಾರರು ಪ್ರಕೃತ ಲೋಯ ವಿಭಾಗದ್ ಅಸಂಸ್ಕೃತಾನುವಾದವೆಂದು ಹೇಳಲಾಗಿರುವ ಲೋಕವಿಭಾಗದಲ್ಲಿ ಕಂಡುಬವಂತೆ ಕೆಲವು ಸಂಗತಿಗಳು ಮತ್ತು ತಿಲೋಯಪಣ್ಣತ್ತಿಯಲ್ಲಿ ಹೇಳಿರುವ ಅದೇ ಸಂಗತಿಗಳ ಮಧ್ಯೆ ಇರುವ ವೈಷಮ್ಯವನ್ನು ಸಾಕ್ಷೀಕರಿಸಿ– "ಇದೇ ರೀತಿಯವಾದ ಇನ್ನೂ ಅನೇಕ ಪ್ರಮಾಣಗಳನ್ನುಉದ್ಧೃತಮಾಡಬಹುದಾಗಿದೆ. ಆದರೆ ಅದರಿಂದ ಗ್ರಂಥ ಭಾರವು ವ್ಯರ್ಥವಾಗಿ ಅಧಿಕವಾಗುವುದು. ಆದ್ದರಿಂದ ಇದಿಷ್ಟರಿಂದಲೇ ತುಷ್ಟರಾಗಿ, ಒಂದನೆಯದಾಗಿ ನಿಯಮಸಾರದಲ್ಲಿ ಮತ್ತು ತ್ರಿಲೋಕ ಪ್ರಜ್ಞಪ್ತಿ (ತಿಲೋಯಪಣ್ಣತ್ತಿ) ಯಲ್ಲಿರುವ ಲೋಕವಿಭಾಗ ಅಥವಾ ಲೋಕವಿಭಾಗಗಳನ್ನು ಕುರಿತಾದ ಯಾವ ಚರ್ಚೆ ಇದೆಯೋ ಅದು ಈ ಲೋಕವಿಭಾಗ(ಗ್ರಂಥ)ದ್ದಾಗಿಲ್ಲ, ಎರಡನೆಯದಾಗಿ 'ಲೋಕವಿಭಾಗ'ವೆಂಬ ಹೆಸರಿನ ಅನೇಕ ಗ್ರಂಥಗಳು ಪ್ರಾಚೀನ ಆಚಾರ್ಯರಿಂದ ರಚಿತವಾಗಿವೆ. ಕಡಿಮೆ ಯಿಂದ ಕಡಿಮೆ ಅವು ಅವಶ್ಯವಾಗಿ ಎರಡಿದ್ದವು, ಮತ್ತು ಅವು ಸರ್ವನಂದಿಯವರ ಲೋಕವಿಭಾಗ(ಲೋಯವಿಭಾಗ)ದಿಂದ ಬೇರೆಯಾದವು. ಸಂಭವನೀಯವಾಗಿ ಇದೇ ಕಾರಣದಿಂದಾಗಿ ನಿಯಮಸಾರದಲ್ಲಿ 'ಲೋಯವಿಭಾಗೇಸು' ಎಂಬ ಬಹುವಚನ ಪ್ರಯೋಗವಿದೆ. ಪ್ರಾಕೃತದಲ್ಲಿ ದ್ವಿವಚನದ ಸ್ಥಾನದಲ್ಲಿ

ಬಹುವಚನಪ್ರಯೋಗವಾಗು ವುದು ಎಂದು ಸ್ಪಷ್ಟಪಡಿಸಿದ್ದಾರೆ (ಪು. ೬೧ರಿಂದ ೬೩). ಇವರ ಈ ಹೇಳಿಕೆ ಕುಂದಕುಂದಸ್ವಾಮಿಯವರ ನಿಯಮಸಾರಕ್ಕೆ ಮಾತ್ರವಲ್ಲದೆ ಯತಿವೃಷಭರದೆಂದು ಪರಿಗಣನೆ ಮಾಡಲಾಗಿರುವ ತಿಲೋಯಪಣ್ಣತ್ತಿಗೂ ಅನ್ವಿತವಾಗುವುದು. ಇದರಿಂದ ತಿಲೋಯಪಣ್ಣತ್ತಿಯಲ್ಲಿ ಕಂಡುಬರುವ ಲೋಯವಿಭಾಗ ಗ್ರಂಥದ ಉಲೇಖ್ಖಾ ಧಾರದಿಂದ ಯತಿವೃಷಭರನ್ನು ಶಕ ಸಂ.೩೮೦ (ಕ್ರಿ.ಶ ೪೫೮)ರ ಅನಂತರ ಕಾಲದವರಾಗಿಸುವ ನಿರ್ಣಯವು ಸಂದಿಗ್ಧತೆಗೆ ಒಳಗಾಗುವುದು. ಪ್ರಸ್ತುತ ಪ್ರಸಂಗ ದಲ್ಲಿ ಮಾನ್ಯ ಡಾ. ಆ. ನೇ.ಉಪಾಧ್ಯೆಯವರು ಇದೇ ತಿಲೋಯ ಪಣ್ಣತ್ತಿಯ ಬಗ್ಗೆ ಹೇಳಿರುವ ಮಾತನ್ನು ಗಮನಕ್ಕೆ ತಂದುಕೊಳ್ಳಬೇಕಾದ ಅಗತ್ಯವಿದೆ. (ತಿಲೋಯ ಪಣ್ಣತ್ತಿಯಲ್ಲಿ ಕಂಡುಬರುವ) ವಿಚಾರಮಂಡನೆಯ ವಿಧಾನ, ಇದರಲ್ಲಿ ಒಳಗೊಂಡಿ ರುವ ವಿಷಯಗಳೆಲ್ಲವೂ ಪೂರ್ವಪರಂಪರಾಗತವಾದುವೆಂಬ ದೃಢ ನಿಲುವು, ಅವ್ಯೈಯಕ್ತಿಕ ಕರ್ತೃತ್ವ ರೀತಿಯದಾಗಿ ವಿಷಯಗಳನ್ನು ಮಂಡನೆ ಮಾಡಿರುವುದು ಮತ್ತು ಸಾಕ್ಷ್ಯಾಧಾರವಾಗಿ ತೋರಿರುವ ಪ್ರಮಾಣ ಗ್ರಂಥಗಳು–ಇವೆಲ್ಲವೂ (ಪ್ರಸ್ತುತ) 'ತಿಲೋಯಪಣ್ಣತ್ತಿ'ಯು (ಗೃದ್ಧ್ರಪಿಂಛ, ಸಮಂತಭದ್ರ, ಸಿದ್ಧ್ಸೇನರೇ ಮುಂತಾದವರಂತಹವರ) ವೈಯಕ್ತಿಕ ಕರ್ತೃತ್ವದ ಅಧಿಕೃತತತ್ವ ಹೊಂದಿರುವ ಈಚಿನ ಕಾಲದ ಪ್ರಕರಣಗಳ ಸಂಬಂಧಕ್ಕಿಂತಲೂ ಹೆಚ್ಚಿನದಾದ ನಂಟಸ್ತಿಕೆಯನ್ನು ಆಗಮ ಗ್ರಂಥಗಳೊಡನೆ ಹೊಂದಿರುವುದನ್ನು ತೋರ್ಪಡಿಸುತ್ತದೆ . . . ಯತಿ ವೃಷಭನು ಶಿವಾರ್ಯ, ವಟ್ಟಕೇರ, ಕುಂದಕುಂದ ಮತ್ತಿತರ ಗ್ರಂಥಕಾರರ ಗುಂಪಿಗೆ ಸೇರುತ್ತಾನೆ. ಮತ್ತು ಅವನ ತೀಲೋಯಪಣ್ಣತ್ತಿಯು (ಷಟ್ಖಂಡಾಗಮ, ಕಷಾಯ ಪಾಹುಡಗಳಂ ತಹ) ಅನುವರ್ತಿ ಆಗಮ (ಪ್ರೋಕೇನಸ್) ಕೃತಿಗಳ ಸಾಲಿಗೆ ಸೇರುತ್ತದೆ..... (ಆಚಾರ್ಯ) ವೀರಸೇನನು ಯತಿ ವೃಷಭನ ಆಶೀರನುಗ್ರಹಕ್ಕಾಗಿ ಪ್ರಾರ್ಥನೆ ಮಾಡಿ ದ್ದಾನೆಹಾಗೂ ಅವನ (ಚೂರ್ಣಿ) ವೃತ್ತಿಸೂತ್ರ ಮಾತ್ರವಲ್ಲದೇತಿಲೋಯಪಣ್ಣತ್ತಿ ಯನ್ನು ಪೂಜ್ಯ ಭಾವಾಭಿವ್ಯಕ್ತಿಯ 'ಸುತ್ತ' ಎಂಬ ಗೌರವನಾಮದಿಂದ ಹೆಸರಿಸಿದ್ದಾನೆ. (ತಿ. ಪ. ಭಾಗ೨ ಪ್ರಸ್ತಾವನೆ ಪು.೪). ಪ್ರಸ್ತುತ ಸಂದರ್ಭದಲ್ಲಿ ತಿಲೋಯಪಣ್ಣತ್ತಿಯ ಬಹುಪ್ರಾಚೀನತೆಯನ್ನು ಸೂಚಿಸುವ ಮತ್ತೂ ಒಂದು ಅಂಶವನ್ನು ಗಮನಿಸಬಹುದಾಗಿದೆ. ವಟ್ಟಕೇರಾಚಾರ್ಯರ ಮೂಲಾಚಾರದ ಪರ್ಯಾಪ್ತ್ಯಾಧಿಕರ ೭೯ನೇ ಗಾಹೆ ಟೀಕೆಯ ಅಂತ್ಯದಲ್ಲಿ 'ದೇವಿಯರ ಆಯುಷ್ಯ ಪ್ರಮಾಣದ ಎರಡನೆ

ಉಪದೇಶ ಪ್ರತಿಪಾದನೆಯನ್ನು ಮುಂದಿನ (೮೦ನೇ)ಗಾಹೆ ಮಾಡುವುದೆಂದು ಟೀಕಾಕಾರ ವಸು ನಂದಿಯವರು ಹೇಳಿದ್ದಾರೆ. ಈ (೮೦ನೇ) ಗಾಹೆಯು ತಿಲೋಯ ಪಣ್ಣತ್ತಿಯ ೫೩೨\೨ನೇ ಗಾಹೆಯಾಗಿದೆ. ಅದ್ದರಿಂದ ಈ ಗಾಹೆಯನ್ನು ವಟ್ಟಕೇರರು ತಿಲೋಯ ಪಣ್ಣತ್ತಿಯಿಂದ ಉಲ್ಲೇಖಿಸಿರುವರೆಂದಾಗುವುದು. ಮೂಲಾಚಾರವು ಕ್ರಿ.ಶ. ೨–೩ನೇ ಶತಮಾನದ ಕೃತಿಯೆಂದು ಒಪ್ಪಲಾಗಿದೆಯಾದ್ದರಿಂದ ತಿಲೋಯಪಣ್ಣತ್ತಿಯು ಈ ಕಾಲಕ್ಕಿಂತ ಹಿಂದಿನದ್ದೆಂದಾಗುವುದು. .

ಮಾನ್ಯ ಡಾ. ಆ. ನೇ. ಉಪಾಧ್ಯೆಯವರ ಮೇಲಿನ ಹೇಳಿಕೆಯಲ್ಲಿರುವ ಒಂದೆರಡು ಅಂಶಗಳ ಬಗ್ಗೆ ಸ್ಪಷ್ಟೀಕರಣದ ಅಗತ್ಯವಿದೆ. ಮೊದಲನೆಯದಾಗಿ ಮಾನ್ಯರು (ದಿಗಂಬರ ಪಂಥದ) ಆಗಮಗಳ ಬಗ್ಗೆ ಪ್ರಯೋಗಿಸಿರುವ 'ಪ್ರೋಕೇನನ್' (ಬದಲಿ ಆಗಮ, ಅಥವಾ ಅನುಮರ್ತಿ ಆಗಮ) ಎಂಬುದರ ಅಸಂಗತತೆಯ ಬಗ್ಗೆ ಹಿಂದೆ ವಿವರಿಸಿದೆ. ಎರಡನೆಯದಾಗಿ, ವೀರಸೇನರು ಚೂರ್ಣಿಸೂತ್ರವೃತ್ತಿಯ ಕರ್ತೃ ಯತಿ ವೃಶಭರೆಂದು ಸ್ಪಷ್ಟವಾಗಿ ನಿರ್ದೇಶಿಸಿ ಅವರಿಗೆ ತಮ್ಮ ಪೂಜ್ಯಭಾವವನ್ನು ವ್ಯಕ್ತಪಡಿಸಿ ದ್ದಾರೆ. ಇಂದ್ರನಂದಿಯವರ ಶ್ರುತಾವತಾರದಲ್ಲಿಯೂ ಚೂರ್ಣಿವೃತ್ತಿಸೂತ್ರಕರ್ತೃ ಯತಿ ವೃಷಭರು ಎಂಬುದಾದ ಸ್ಪಷ್ಟನಿರ್ದೇಶನವಿದೆ. ಈ ಆಧಾರಗಳಿಂದಲೇ ಚೂರ್ಣಿ ಸೂತ್ರವು ಯತಿ ವೃಷಭರಚಿತವಾದುದೆಂದು ನಿಸ್ಸಂದಿಗ್ಧವಾಗಿ ಗ್ರಹಿಸಲಾಗಿದೆ. ಆದರೆ ಈ ಗ್ರಹಿಕೆ ತಿಲೋಯ ಪಣ್ಣತ್ತಿಗೆ ಅನ್ವಿತವಾಗುವುದಿಲ್ಲ. ವೀರಸೇನರು ಈ ಕೃತಿಯನ್ನು 'ಸುತ್ತ' ಎಂದು ಹೆಸರಿಸಿ ಆಗಮ ಸದೃಶವಾಗಿ ಇದಕ್ಕೆ ಪೂಜ್ಯಭಾವ ವ್ಯಕ್ತಪಡಿಸಿರುವ ರೆಂಬುದು ನಿಜ ; ಹಾಗೆಯೇ ಇದರಿಂದ ಯಾವ ಸೂಚನೆಯಾಗಲಿ ಇಲ್ಲವಾಗಿದೆಯೆಂಬು ದನ್ನೂ ಗಮನದಲ್ಲಿರಿಸಿಕೊಳ್ಳಬೇಕಾಗಿದೆ. ಹಿಂದೆ ತಿಲೋಯಪಣ್ಣತ್ತಿಯ ಅಂತ್ಯದಲ್ಲಿ ರುವ ಎರಡು ಗಾಹೆಗಳನ್ನು ಉಲ್ಲೇಖಿಸಿ ಅವುಗಳಲ್ಲಿ ಮೊದಲನೆಯದರೊಡನೆ ಹೆಚ್ಚನದಾಗಿ ಸದೃಶತರವಾಗಿರುವ ಜಯಧವಲಾದ ಗಾಹೆಗನ್ನು ಉಲ್ಲೇಖಿಸಿದೆ. ಆದರೆ ಜಯಧವಲಾದ ಈ ಗಾಹೆಯಿಂದ ತಿಲೋಯಪಣ್ಣತ್ತಿಯು ಯತಿವೃಷಬ ರಚನೆಯಾಗಿದೆಯೆಂಬ ಸೂಚನೆ ಸರ್ವಥಾ ದೊರೆಯುವುದಿಲ್ಲ.

ಮಾನ್ಯ ಡಾ. ಆ ನೇ. ಉಪಾಧ್ಯೆಯವರ ಮೇಲಿನ ಹೇಳಿಕೆಯಲ್ಲಿರುವ ಇತರ ಅಂಶಗಳು ತಿಲೋಯಪಣ್ಣತ್ತಿಯ ಆಗಮಲಕ್ಷಣ ಸಮಪನ್ನತೆಯನ್ನು ಸ್ಪಷ್ಟಪಡಿಸು ತ್ತವೆಯಲ್ಲದೆ ಆಗಮ ಗ್ರಂಥಗಳ ರಚನೆಯ ಅತ್ಯಂತ ನಿಕಟವರ್ತಿಸಮಯದಲ್ಲಿ ಇದರ ರಚನೆಯಾಗಿರಬೇಕೆಂದು ಸೂಚನೆ ಕೊಡುತ್ತವೆ. ಯತಿ ವೃಷಭರು ಕುಂದಕುಂದ ಸ್ವಾಮಿಯವರ ಹಿರಿಯಸಮಕಾಲೀನರೆಂದು ಹಿಂದೆ ನಿರೂಪಿಸಿದೆ. ಇವರು ಮುಂಚಿತ ವಾಗಿ ಚೂರ್ಣಿವೃತ್ತಿ ಸೂತ್ರದ ರಚನೆ ಮಾಡಿ ಅನಂತರ ತಿಲೋಯಪಣ್ಣತ್ತಿಯ ರಚನೆ ಮಾಫ್ಡಿರುವರೆಂದು ತಿಳಿಯಬೇಕಾಗಿದೆ. ಕುಂದಕುಂದ ಸ್ವಾಮಿಯವರು ಮುಂಚಿತವಾಗಿ ಪಂಚಾಸ್ತಿಕಾಯವೇ ಮುಂತಾದ ಪಾಹುಡ ಸಂಗ್ರಹಗಳ ರಚನೆ ಮಾಡಿ ಕೊನೆಯದಾಗಿ ಷಟ್ ಖಂಡಾಗಮದ ಮೊದಲ ಮೂರು ಖಂಡಗಳಿಗೆ ಪರಿಕರ್ಮಟೀಕೆ ರಚನೆ ಮಾಡಿ ದ್ದಾರೆ. ಪ್ರಾಯಶಃ ಈ ಸಮಯದಲ್ಲಿ ಯತಿ ವೃಷಭರು ತಿಲೋಯ ಪಣ್ಣತ್ತಿಅಯನ್ನು ರಚನೆ ಮಾಡಿದರಾಗಿ ಅದರಲ್ಲಿ ಕುಂದಕುಂದಸ್ವಾಮಿಗಳವರ ಸಮಯಸಾರ, ಪಂಚಾಸ್ತಿಕಾಯ, ಪ್ರವಚನಸಾರಗಳ ಹಾಗೂ ಮೂಲಾಚಾರದ ಗಾಹೆಗಳೊಡನೆ ಏಕತೆ ಇಲ್ಲವೆ ಸದೃಶತೆ ಹೊಂದಿರುವ ಗಾಹೆಗಳನ್ನು ಕಾಣಬಹುದಾಗಿದೆ (ತಿಲೋಯಪಣ್ಣತ್ತಿ ಭಾಗ ೨ ಹಿಂದೀ ಪ್ರಸ್ತಾವನಾ, ಪು. ೩೮–೪೪). ಇದರಂತೆ ಚೂರ್ಣಿಸೂತ್ರವೃತ್ತಿರಚನಕಾರ ಯತಿ ವೃಷಭರಿಂದಲೇ ತಿಲೋಯಪಣ್ಣತ್ತಿಯ ರಚನೆಯಾಗಿರಬಹುದಾದ ಸಂಭಾವ್ಯತೆ ಯನ್ನು ಕಾಣಬಹುದು. ಆದರೆ ಈಗ ಉಪಲಬ್ಧವಿರುವ ರೂಪದಲ್ಲಿಯೇ ಪೂರ್ಣರೀತಿ ಯಲ್ಲಿ ಯತಿ ವೃಷಭರಿಂದ ರಚನೆಯಾಗಿರಬಹುದಾದ ಸಂಭಾವ್ಯತೆ ರಚಿತವಾಗಿದ್ದ ಮೂಲ ರೂಪದ ತಿಲೋಯಪಣ್ಣತ್ತಿಯು, ಕಾಲಾನುಕ್ರಮದಲ್ಲಿ ಸಂಯೋಜಿತವಾಗಿರುವ ಬಹುಸಂಖ್ಯಾತ ಪ್ರಕ್ಷಿಪ್ತ ಪಾಠಗಳನ್ನೊಳಗೊಂಡು ಉಳಿದು ಬಂದಿದೆಯೆಂಬುದರ ಬಗ್ಗೆ ವಿವಾದವಿಲ್ಲ. ಇಂತಹ ಒಂದು ಮೌಲಿಕರೂಪದ ತಿಲೋಯಪಣ್ಣತ್ತಿ ಇದ್ದಿತೆಂದು ಸಿದ್ಧಾಂತಶಾಸ್ತ್ರ ಕೋವಿದರಾದ ಮಾನ್ಯ ಫೂಲ್ ಚಂದ್ ಜೈನ್ ಅವರು ಅಭಿಪ್ರಾಯ ಹೊಂದಿಂದ್ದರೆಂದು ಹೇಳಲಾಗಿದೆ. (ತಿ. ಪ. ಭಾ. ೨, ಪ್ರ. ಪು. ೧೦). ಈ ರೀತಿಯಾದ ಮೂಲರೂಪದ ತಿಲೋಯಪಣ್ಣತ್ತಿಯ ಕುಂದಕುಂದ ಸ್ವಾಮಿಯವರ ಹಿರಿಯ ಭ್ರಾತೃ ಗುರುಸದೃಶರಾಗಿ ಜೀವಿಸಿದ್ದ ಮತ್ತು ಚೂರ್ಣಿಸೂತ್ರವೃತ್ತಿ ಕರ್ತೃಗಳಾದ ಯತಿ ವೃಷಭರಿಂದ ರಚಿತವಾಗಿರಬಹುದಾದ ಸಂಭಾವ್ಯತೆಯನ್ನು ಈಗ

ಅಲ್ಲಗಳೆಯುವಂತಿಲ್ಲ. ಯತಿ ವೃಷಭರು ಕುಂದಕುಂದ ಸ್ವಾಮಿಯವರ ಹಿರಿಯ ಬ್ರಾತೃಗುರುಸದೃಶರಾಗಿದ್ದಿ ರಬಹುದೆಂಬುದಕ್ಕೆ ಪರೋಕ್ಷ ರೀತಿಯಿಂದ ಕುಂದಕುಂದಸ್ವಾಮಿಯವರ ಈ ಮುಂದಿನ ಹೇಳಿಕೆಗಳು ಸಮರ್ಥನೆ ಗೊಡುತ್ತವೆ.

ಕುಂದಕುಂದಾಚಾರ್ಯರು ತಮ್ಮ (೧) ದರ್ಶನ ಪಾಹುಡದಲ್ಲಿ ಮುಂದಿನ ಗಾಹೆ ಯಲ್ಲಿ 'ಗುಣಧರ ಎಂಬ ಹೆಸರನ್ನು ಹೇಳಿ ಅಂತಹ ಗುಣಧರರ ಗುಣಗಳನ್ನು ಹೇಳುವಂತಹವರು ವಂದನೀಯರೆಂದು ಹೇಳಿದ್ದಾರೆ.

ದಂಸಣಣಾಣ ಚರಿತ್ತೇ ತವವಿಣಯೇ ಣಿಚ್ಚಕಾಲ ಸುಪಸತ್ಥಾ ।
ಏದೇ ದು ವಂದಣೀಯಾ ಜೇ ಗುಣವಾದೀ ಗುಣಾಧರಾ ಣಂ ॥೨೩॥

(೨) ಪ್ರಾಕೃತ ಯೋಗಿ ಭಕ್ತಿಯ ಮೊದಲಗಾಹೆಯಲ್ಲಿ

ಥೋಸ್ಸಾಮಿ ಗುಣಹರಾಣಂ ಅಣಯಾರಾಣಂ ಗುಣೇಹಿ ತಚ್ಚೇಹಿಂ ॥

ಎಂದು 'ಗುಣಧರ' ಎಂಬ ಹೆಸರನ್ನು ಹೇಳಿ ಸ್ತುತಿಸಿದ್ದಾರೆ.

(೩) ಬೋಧ ಪಾಹುಡದಲ್ಲಿ

ಸಿದ್ಧಂ ಜಸ್ಸ ಸದತ್ಥಂ ವಿಸುದ್ಧ ಝಾಣ ಸ್ಸಣಾಣಜುತ್ತಸ್ಸ ।
ಸಿದ್ಧಾ ಯತಣಂ ಸಿದ್ಧಂ ಮುಣಿವರವಸಹಸ್ಸ ಮುಣಿದತ್ಥಂ ॥

ಎಂದು 'ಮಣಿವರಹವಸಹ' ಎಂಬ ಹೆಸರಿನೊಡನೆ ಪರೋಕ್ಷವಾಗಿ 'ಯತಿವೃಷಭ'ರ ಹೆಸರನ್ನು ಸೂಚಿಸಿದ್ದಾರೆ.

(೪) ಬೋಧಪಾಹುಡದಲ್ಲಿ–

ಪಂಚಮಹಹವ್ವಯಜುತ್ತಾ ಪಂಚಿಂದಿಯ ಸಂಜಯಾ ಣಿರಾವೇಕ್ಖಾ ।

ಸಜ್ಝಾಯ ಝಾಣಜುತ್ತಾ ಮುಣಿವರಹವಸಹಾ ಣಿಇಚ್ಛಂತಿ ॥

ಎಂದು ಮತ್ತೆ 'ಮಣಿವರಹವಸಹಾ' ಎಂಬ ಹೆಸರಿನೊಡನೆ ಪರೋಕ್ಷವಾಗಿ ಯತಿ ವೃಷಭರನ್ನು ಸೂಚಿಸಿದ್ದಾರೆ.

(೫) ಪ್ರಾಕೃತ ಆಚಾರ್ಯಭಕ್ತಿಯಲ್ಲಿ–

ಗಯಣಮಿವ ಣಿರುವಲೇವಾ ಅಕ್ಖೋವಾ ಸಾಯರುವ್ವ ಮುಣಿವಸಹಾ ।

ಏರಿಸ ಗುಣ ಣಿಲಯಾಣಂ ಪಾಯಂ ಪಣಮಾಮಿ ಸುದ್ಧಮಣೋ ॥

ಎಂದು 'ಮುಣಿವಸಹಾ' ಎಂಬ ಹೆಸರಿನೊಡನೆ ಪರೋಕ್ಷವಾಗಿ ಯತಿ ವೃಷಭರ ಹೆಸರನ್ನು ಸೂಚಿಸಿದ್ದಾರೆ.

(೬) ಪ್ರವಚನಸಾರದ ಜಯಸೇನರ ಟೀಕೆಯಲ್ಲಿರುವಂತೆ–

ತಂ ದೇವದೇವಂ ಜದಿವರವಸಹಂ ಗುರುಂ ತಿಲೋಯಸ್ಸ ।

ಪಣಮಂತಿ ಜೇ ಮಣುಸ್ಸಾ ತೇ ಸೊಕ್ಖಂ ಅಕ್ಖಯಂ ಜಂತಿ ॥

ಎಂದು 'ಜದಿವರವಸಹಂ' ಎಂಬ ಹೆಸರಿನ ಮೂಲಕ ಯತಿ ವೃಷಭರನ್ನು ಸೂಚಿಸಿದ್ದಾರೆ.

ವಸಹ (=ವೃಷಭ) ಎಂಬುದಕ್ಕೆ 'ಶ್ರೇಷ್ಠ' ಎಂಬ ಅರ್ಥವಿದೆಯಾಗಿ 'ಮುಣಿವರ ವಸಹ', 'ಮುಣಿವಸಹ' ಮತ್ತು 'ಜದಿವರವಸಹ' ಎಂಬವುಗಳಿಗೆ 'ಮುನಿವರರಲ್ಲಿ ಶ್ರೇಷ್ಠರಾದ ಗಣಧರಾದಿಗಳು' 'ಮುನಿಶ್ರೇಷ್ಠರು' ಎಂಬ ಮೂಲಾರ್ಥವಿದೆಯಾದರೂ ಪರ್ಯಾಯವಾಗಿ ಕುಂದಕುಂದರು ಗುರುಭಕ್ತಿಪೂರ್ವಕ ಯತಿ ವೃಷಭರನ್ನು ಸೂಚಿಸಿರುವರೆಂದು ತಿಳಿಯಬಹುದಾಗಿದೆ.

ಇದೇ ರೀತಿಯಾಗಿ ಕುಂದಕುಂದರು 'ಆಗಮ'(ಸುತ್ರ)ದ ಬಗ್ಗೆ ಹೇಳಿರುವ ಮಾತನ್ನೂ ಪ್ರಕೃತಸಂದರ್ಭದಲ್ಲಿ ಗಮನಿಸಬೇಕಾದಂತಹುವಾಗಿವೆ.

ಸೂತ್ರಪಾಹುಡ :

ಸುತ್ತಮ್ಮಿ ಜಂ ಸಿದಿಟ್ಟಂ ಆಇರಿಯ ಪರಂಪರೇಣ ಮಗ್ಗೇಣ ।

ಣಾಊಣ ದುವಿಹಸುತ್ತಂ ವಟ್ಟದಿ ಸಿವಮಗ್ಗಜೋ ಭವ್ವೋ ॥ ೩ ॥

ಅರ್ಥ–ಸುತ್ತ(ಆಗಮ)ದಲ್ಲಿ ಉತ್ತಮರೀತಿಯಿಂದ ಹೇಳಲಾಗಿರುವುದನ್ನು ಯಾವ ಭವ್ಯನು ಆಚಾರ್ಯಾಪರಂಪರೆಯ ಮಾರ್ಗದಿಂದ ದ್ವಿವಿಧಸುತ್ತ(ಆಗಮ)ವನ್ನು ತಿಳಿ ಯುವನೋ ಅವನು ಮೋಕ್ಷಮಾರ್ಗದಲ್ಲಿರುವನು.

ಇಲ್ಲಿ ಹೇಳಿರುವ (ದಿವಿಹ ಸುತ್ತ) ದ್ವಿವಿಧ ಆಗಮ ಎಂಬುದಕ್ಕೆ ದ್ರವ್ಯ ಮತ್ತು ಭಾವ ಸ್ವರೂಪದಿಂದ ಎರಡು ಪ್ರಕಾರದ ಆಗಮ ಎಂದು ಅರ್ಥಹೇಳಬಹುದು. ಅಥವಾ ಕುಂದಕುಂದಸ್ವಾಮಿಯವರೇ (ಸೂತ್ರ ಪಾಹುಡ ಗಾಹೆ ೬ರಲ್ಲಿ) ಹೇಳಿರುವಂತೆವ್ಯವಹಾರ ಮತ್ತು ಪರಮಾರ್ಥ ಎಂಬ ಎರಡು ಪ್ರಕಾರದ ಆಗಮ ಎಂದೂ ತಿಳಿಯಬಹುದು. ಇದಲ್ಲದೆ, ಇಂದ್ರನಂದಿಯವರು ತಮ್ಮ ಶ್ರುತಾವತಾರದಲ್ಲಿ 'ಈ ರೀತಿಯಾಗಿ ಷಟ್ಖಂಡಾಗಮ ಮತ್ತು ಕಸಾಯ ಪಾಹುಡ ದ್ವಿವಿಧ ಆಗಮವು ದ್ರವ್ಯ ಭಾವರೂಪದಿಂದ ಪುಸ್ತಕತವಾಗಿ ಗುರುಪರಿಪಾಟಿಯಿಂದ ಕುಂದಕುಂದಪುರದಲ್ಲಿದ್ದ ಪದ್ಮ ನಂದಿ(ಕುಂದಕುಂದಸ್ವಾಮಿ)ಯವರಿಗೆ ದೊರೆಯಿತೆಂದು ಹೇಳಿದ್ದಾರೆಯಾಗಿ ಮೇಲೆ ಉಲ್ಲೇಖಿಸಿರುವ ಗಾಹೆಯ 'ದುವಿಹಸುತ್ತಂ' ಎಂಬುದಕ್ಕೆ 'ಷಟ್ಖಂಡಾಗಮ ಮತ್ತು ಕಸಾಯ ಪಾಹುಡ ಆಗಮ ದ್ವಿಪ್ರಕಾರವನ್ನು' ಆಚಾರ್ಯ ಪರಂಪರೆಯ ಮಾರ್ಗದಿಂದ ತಿಳಿದು ಭವ್ಯನು ಮೋಕ್ಷಮಾರ್ಗಸ್ಥನಾಗುವನು ಎಂಬ ಅರ್ಥವನ್ನೂ ಪರ್ಯಾಯ ರೂಪದಿಂದ ಕಾಣಬಹುದಾಗಿದೆ.[೦೦]

ಈ ಪ್ರಕಾರದಿಂದ ಷಟ್ ಖಂಡಾಗಮ ಮತ್ತು ಕಸಾಯಪಾಹುಡಗಳ ಉದಯ ಮತ್ತು ಇವುಗಳ ವ್ಯಾಖ್ಯಾನಕಾರರ ಅನುಕ್ರಮದ ಬಗ್ಗೆ ಇಂದ್ರನಂದಿಯವರು ಶ್ರುತಾ ವತಾರದಲ್ಲಿ ಹೇಳಿರುವ ಇತಿವೃತ್ತವು ನಿಸ್ಸಂದಿಗ್ಧರೀತಿಯಿಂದ ಪ್ರಾಮಾಣಿಕವಾಗಿದೆಯೆಂದು ಸಿದ್ಧವಾಗುವುದಲ್ಲದೆ ಚೂರ್ಣಿಸೂತ್ರವೃತ್ತಿಕಾರ ಯತಿ ವೃಷಭರು ಕುಂದ ಕುಂದಸ್ವಾಮಿಯವರ ಹಿರಿಯ ವಯಸ್ಸಿನ ಸಮಕಾಲೀನರೆಂಬ ಹಿಂದಿನ ಪ್ರತಿಪಾ ದನೆಯೂ ಪುನಃ ಸಮರ್ಥಿತವಾಗುವುದು. ಯತಿ ವೃಷಭರ

ಕಾಲವನ್ನು ಕುರಿತ ಈ ಮೇಲಿನ ನಿರ್ಣಯಕ್ಕೆ ಬಾಧಕವಾಗಿರುವ ಮತ್ತೂ ಒಂದು ಅಂಶವನ್ನು ಈಗ ಪರಿ ಷ್ಕರಿಸಬೇಕಾದ ಅಗತ್ಯವಿದೆ.

ಚೂರ್ಣಿಸೂತ್ರಕಾರ ಯತಿ ವೃಷಭರೇ ತಿಲೋಯಪಣ್ಣತ್ತಿಯ ರಚನಕಾರರೂ ಆಗಿರುವರೆಂದು ಹೇಳಿ ತಿಲೋಯಪಣ್ಣತ್ತಿಯಲ್ಲಿ ಭ. ಮಹಾವೀರನಿಂದ ೧೦೦೦ದ ವರ್ಷದಲ್ಲಿ ಕಲ್ಕಿರಾಜನ ರಾಜ್ಯಭಾರ ಸಮಾಪ್ತವಾಯಿತೆಂದು ಹೇಳಿರುವುದರ ಆಧಾರ ದಿಂದ, ಯತಿ ವೃಷಭರ ಕಾಲವನ್ನು ವೀ. ನಿ. ಸಂ. ೧೦೦೦ ವರ್ಷಗಳ ಆಸುಪಾಸಿನ ದಾಗಿದೆಯೆಂದು ಶ್ರೀ ನಾಥೂರಾಂ ಪ್ರೇಮಿಯವರು ಮತ್ತು ಕ.ಪಾಹುಡ ಪ್ರಸ್ತಾವನಾ ಕಾರರು ಹೇಳಿರುವುದು ಸ್ಪಷ್ಟವಿದೆ. ಒಂದೊಮ್ಮೆ ಚೂರ್ಣಿಸೂತ್ರವೃತ್ತಿ ಮತ್ತು ತಿಲೋಯಪಣ್ಣತ್ತಿ ರಚನಕಾರರು ಕಲ್ಕಿರಾಜನ ಸಮಕಾಲೀನರಾಗಿದ್ದಪಕ್ಷದಲ್ಲಿ ಅವರಿಗೆ ಕಲ್ಕಿರಾಜನ ಸ್ಪಷ್ಟ ಇತಿವೃತ್ತ ತಿಳಿದಿರಬೇಕಿದ್ದಿತು. ಈ ಕಲ್ಕಿರಾಜನ ಬಗ್ಗೆ ತಿಲೋಯಪಣ್ಣತ್ತಿಯಲ್ಲಿ ದೊರೆಯುವ ಐತಿಹಾಸಿಕ ಸಂಗತಿ ಅಷ್ಟಾಗಿ ಸ್ಪಷ್ಟವಿಲ್ಲ.

ಶ್ರೀ ನಾಥೂರಾಂ ಪ್ರೇಮಿಯವರು ತಿಲೋಯಪಣ್ಣತ್ತಿಯಿಂದ ಉಲ್ಲೇಖಿಸಿರುವ ಒಂದು ಮತದಂತೆ ಭ. ಮಹಾವೀರನು ನಿರ್ವಾಣಹೊಂದಿದ ಅನಂತರ ೪೬೧ ವರ್ಷ ಕಳೆದಿರಲು ಶಕ ರಾಜನಾದನು. ಈ ವಂಶದವರು ೨೪೨ ವರ್ಷ ರಾಜ್ಯವಾಳುತ್ತಾರೆ. ಬಳಿಕ ಗುಪ್ತವಂಶದವರ ರಾಜ್ಯಭಾರ ೨೫೫ ವರ್ಷ, ಅನಂತರ ಚತುರ್ಮುಖನ (ಕಲ್ಕಿಯ) ಆಳ್ವಿಕೆ ೪೨ವರ್ಷ –ಹೀಗೆ ಕೆಲವರು ಪ್ರರೂಪಿಸುತ್ತಾರೆ. (ಗಾಹೆ ೯೩,೯೪)[೬೩] ಒಟ್ಟು ಕಾಲ ೪೬೧+೨೪೨+೨೫೫+೪೨=ವೀ. ನಿ. ಸಂ. ೧೦೦೦ ಕಲ್ಕಿ ರಾಜ್ಯಭಾರಾಂತ್ಯ.

ಮತ್ತೊಂದು ಪ್ರರೂಪಣೆಯಂತೆ–ಭ. ಮಹಾವೀರನ ನಿರ್ವಾಣದಂದು ಉಜ್ಜಯಿನಿಯ (ಚಂಡಪ್ರದ್ಯೋತನ ಮಗ) ಪಾಲಕನ ರಾಜ್ಯಾಭಿಷೇಕ, ಅವನ ಅಥವಾ ಅವನ ಸಂತತಿಯ ರಾಜ್ಯಭಾರ ೬೦ವರ್ಷ, ಅಲ್ಲಿಂದ ಮುಂದೆ ೧೫೫ ವರ್ಷ ವಿಜಯ ವಂಶದವರ ರಾಜ್ಯಭಾರ (ವಿಜಯಸೇನ ಎಂಬುದು ನಂದಿವರ್ಧನ ಅಥವಾ ನಂದನಮತ್ತೊಂದು ಹೆಸರು) ಬಳಿಕ ಮರುದಯ ವಂಶದವರ ಆಳ್ವಿಕೆ ೪೦ವರ್ಷ, ಪುಷ್ಯ ಮಿತ್ರನ ಆಳ್ವಿಕೆ ೩೦ ವರ್ಷ, ವಸುಮಿತ್ರನ ರಾಜ್ಯಭಾರ ೬೦ ವರ್ಷ, ಗರ್ದಭಿಲ್ಲರ ಆಳ್ವಿಕೆ ೧೦೦ ವರ್ಷ, ನರವಾಹನನ ಆಳ್ವಿಕೆ ೪೦ ವರ್ಷ, ಬಳಿಕ ಭೃತ್ಯಾಂಧ್ರರ ಆಳ್ವಿಕೆ

೨೪೨ ವರ್ಷ ಆ ಬಳಿಕ ಗುಪ್ತರ ರಾಜ್ಯಭಾರ ೨೩೧ ವರ್ಷ ಆಗ ಕಲ್ಕಿಯು ಉತ್ಪನ್ನನಾದನು. ಇವನ ತಂದೆ ಇಂದ್ರ, ಇವನ ಹೆಸರು ಚತುರ್ಮುಖ, ಇವನು ೭೦ ವರ್ಷಕಾಲ ಜೀವಿಸಿದ್ದನು. ೪೨ ವರ್ಷಕಾಲ ರಾಜ್ಯಭಾರ ಮಾಡಿದನು. (ಗಾಹೆ.೯೫-೯೯) ಹೀಗೆ ಒಟ್ಟು ಕಾಲ ೬೦+ ೧೫೫ + ೪೦ + ೩೦ + ೬೦ + ೧೦೦ + ೪೦ + ೨೪೨ + ೨೩೧ + ೪೨=ವೀ. ನಿ. ಸಂ. ೧೦೦೦.

ಮತ್ತೂ ಒಂದು ಗಣನೆಯಂತೆ-ಆಚಾರಂಗಧರರ ಬಳಿಕ ೨೭೫ ವರ್ಷಗಳು ಕಳೆದಿರಲು ಕಲ್ಕೀಶ್ವರ ರಾಜನ ಪಟ್ಟವಯಿತು. (ಗಾಹೆ. ೧೦೦) ಆಚರಾಂಗಧರರ ಕಾಲ ಭ. ಮಹಾವೀರ ನಿರ್ವಾಣದಿಂದ ೬೮೩ ವರ್ಷಕ್ಕೆ ಕೊನೆ. ಇದರಂತೆ ಕಲ್ಕಿಯ ರಾಜ್ಯಭಾರ. (೬೮೩+೨೭೫=)ವೀ. ನೀ. ಸಂ. ೯೫೮ರಲ್ಲಿ ಆರಂಭವಗಿದೆ. ಬಳಿಕ ಕಲ್ಕಿಯು ತನಗೆ ಯೊಗ್ಯವಾದ ಜನಪದಗಳನ್ನು ಪ್ರಯತ್ನಪೂರ್ವಕ ಸಾಧಿಸಿ. ಅತಿ ಯಾದ ಲೋಭವುಳ್ಳವನಾಗಿ ಶ್ರಮಣರಿಂದ ಸುಂಕವನ್ನು ಕೇಳುತ್ತಾನೆ. ಇದರಿಂದ  ತಮ್ಮ ಆಹಾರದ ಮೊದಲ ತುತ್ತನ್ನು ಕೊಡುವಲ್ಲಿ (ತಾವು ಆಹಾರ ಪಡೆಯುವ ವಿಧಿ ವಿಧಾನ ಕ್ರಮದಂತೆ) ಅಂತರಾಯ ಉಂಟಾದ್ದರಿಂದ ಆಹಾರ ಪಡೆಯುವ ವಿಧಿ ವಿಧಾನ ಕ್ರಮದಂತೆ) ಅಂತರಾಯ ಉಂಟಾದ್ದರಿಂದ ಆಹಾರ ತೆಗೆದುಕೊಳ್ಳದೆ ಹೊರಟು ಹೋಗುತ್ತಿದ್ದರು. ಆ ಮುನಿಗಳಲ್ಲಿ ಒಬ್ಬರಿಗೆ ಅವಧಿಜ್ಞಾನ ಉತ್ಪನ್ನ ವಾಯಿತು. ಅನಂತರ ಒಬ್ಬ ಅಸುರದೇವನು ಮುನಿಗಣಕ್ಕೆ ಉಪಸರ್ಗವಾಗಿರುವುದನ್ನು ಅವಧಿಜ್ಞಾನದಿಂದ ತಿಳಿದು ಆ ಕಲ್ಕಿಯನ್ನು ಧರ್ಮದ್ರೋಹಿಯಾಹಿರುವನೆಂದು ಕೊಂದು ಹಾಕಿದನು. ಕಲ್ಕಿಯ ಮಗ ಅಜಿತಂಜಯನು ಅವ್ನ ಕಾಲಿಗೆರಿದನು. ಅವನನ್ನು ಅಸುರದೇವನು ಧರ್ಮರಾಜ್ಯ ನಡೆಸುವುದಕ್ಕಾಗಿ ರಕ್ಷಿಸಿದನು. ಬಳಿಕ ಎರಡು ವರ್ಷ ಜನರಿಗೆ ಉತ್ತಮಧರ್ಮದ ಪ್ರವರ್ತನೆಯಾಯಿತು. ಆ ಬಳಿಕ ಕಾಲಕ್ರಮದಿಂದ  ಧರ್ಮ ಕ್ಷೀಣಿಸುತ್ತಾ ನಡೆಯುವುದು. ಈ ರೀತಿ ೧೦೦೦ ವರ್ಷಕ್ಕೊಬ್ಬನಂತೆ ಕಲ್ಕಿ ಯಾಗುವನು ಮತ್ತು ೫೦೦ ವರ್ಷಕ್ಕೊಬ್ಬನಂತೆ ಉಪಕಲ್ಕಿಯಾಗುವನು. (ಗಾಹೆ ೧೦೧-೧೦೬).

ಪುನ್ನಾಟ ಸಂಘದ ಜಿನಸೇನರ ಹರಿವಂಶ ಪುರಾಣದಲ್ಲಿ (ಪರ್ವ-೬೦, ಶ್ಲೋ ೪೮೮-೪೯೩) ಮೇಲೆ ಹೇಳಿರುವ ಪಾಲಕನ ರಾಜ್ಯಭಾರದದಿಯಾಗಿ ಕಲ್ಕಿ ರಾಜ್ಯಭಾರ ಪರ್ಯಂತದ ೧೦೦೦ ವರ್ಷಗಳ

ಆಳ್ವಿಕೆಯನ್ನು ಹೇಳಿದೆ. ಇಲ್ಲಿ ಹೇಳಿರುವ ವಿಶೇಷ ಸಂಗತಿ ಕಲ್ಕಿಯ ಮಗ ಅಜಿತಂಜಯನು ಇಂದ್ರಪುರದಲ್ಲಿದ್ದನು. 'ತತೋऽಜಿತಂ ಜಯೋ ರಾಜಾ ಸ್ಯಾದಿಂದ್ರ ಪುರಸಂಸ್ಥಿತಃ' ಎಂತಹ.[೬೫]

ಆಚಾರ್ಯ ಜಿನಸೇನ–ಗುಣಭದ್ರಸ್ವಾಮಿ ವಿರಚಿತ ಮಹಾಪುರಾಣದ ವರ್ಧಮಾನ ಸ್ವಾಮಿ ಪುರಾಣದಲ್ಲಿ ಕಲ್ಕಿಯ ಐತಿಹ್ಯ ನಿರೂಪಿತವಾಗಿದೆ. (ಶ್ಲೋ. ಸಂ. ೧೬೩೭–೧೬೭೦) ಇಲ್ಲಿ ಹೇಳಿರುವಂತೆ ದುಷ್ಷಮಕಾಲದ ೧೦೦೦ ವರ್ಷಕಳೆದಿದ್ದಿತು. (ಇದರಂತೆ ವೀ. ನಿ. ಸಂ. ೧೦೦೪ನೇ ವರ್ಷ) ಆಗ, ಪಾಟಲೀಪುತ್ರ ನಗರದಲ್ಲಿ ಶಿಶುಪಾಲರಾಜ ಮತ್ತು ಪೃಥವೀ ಸುಂದರಿಯರ ಮಗ ಚತುರ್ಮುಖನು ಮಘಾಸಂವತ್ಸರ ಯೋಗ ಸಮಾಗದಲ್ಲಿಉತ್ಪನ್ನನಾಗುವನು. ಇವನ ಪರಮಾಯುಷ್ಯ ೭೦ವರ್ಷ, ರಾಜ್ಯಭಾರ ೪೦ವರ್ಷ. ಮುನಿಗಳ ಆಹಾರದ ಪ್ರಥಮ ಗ್ರಾಸವನ್ನು ಶುಲ್ಕವಾಗಿ ಕೇಳಿದ ಇವನನ್ನು ಕೋಪಗೊಂಡ ಅಸುರನೊಬ್ಬನು ಕೊಲ್ಲುತ್ತಾನೆ. ಇವನ ಮಗ ಧೀಮಂತ ಅಜಿ ತಂಜಯ, ಇವನು ತನ್ನ ಪತ್ನಿ ಚೇಲಕೆ ಸಹಿತ ಅಸುರನಿಗೆ ಶರಣು ಹೋಗುತ್ತಾನೆ.ಮುಂದೆ ಕೆಲಕಾಲ ಜಿನೇಂದ್ರ ಧರ್ಮವು ಚೆನ್ನಾಗಿ ಪ್ರವರ್ತಿಸುವುದು. ಪ್ರತಿಸಾವಿರ ವರ್ಷಕ್ಕೊಬ್ಬನಂತೆ ೨೦ ಕಲ್ಕಿಗಳಾಗುವರು. ೫೦೦ ವರ್ಷಗಳಿಗೊಮ್ಮೆ ಉಪಕಲ್ಕಿ ಗಳಾಗುವರು.

ಇದೇ ವಿಷಯವನ್ನು ಕುರಿತು ಮಾಘನಂದ್ಯಾಚಾರ್ಯ ವಿರಚಿತ ಶಾಸ್ತ್ರಸಾರ ಸಮು ಚ್ಚಯ ಟೀಕುವಿನಲ್ಲಿ ಮುಂದಿನಂತೆ ಹೇಳಿದೆ–(ಪು. ೨೭–೨೮–೨೯)

"ವರ್ಧಮಾನಸ್ವಾಮಿಯು ಮೋಕ್ಷ ಹೊಂದಿದ ನಂತರ ಆರು ನೂರೈದು ವರ್ಷವುಂ ಐದು ತಿಂಗಳುಂ (೬೦೫ ವ.–೫ ತಿಂ.) ಕಳೆದಮೇಲೆ ಶಕರಾಜನು ಹುಟ್ಟಿದನು. ಆ ಅರಸನಿಂ ಬಳಿಕ ಕಲ್ಕಿಯುತ್ಪತ್ತಿ ವರ್ಷಂಗಳು ೩೯೪, ಮಾಸಂ ೭ (=ವೀ. ನಿ. ಸಂ. ೧೦೦೦ವರ್ಷ)

ಮತ್ತೂ ಪಾಟಲಿಪುತ್ರದ ಶಿಶುಪಾಲಂಗಂ ಚತುರ್ಮುಖನೆಂಬ ಪ್ರಥಮ ಕಲ್ಕಿ ಗೆಪ್ಪತ್ತು (೭೦) ಸಂವತ್ಸರಾಯುಷ್ಯವು, ಇಪ್ಪತ್ತೆಂಟುವರ್ಷ ಕುಮಾರ ಕಾಲ ಕಳೆಯಲು ಆ ಆಚಾರಾಂಗಧರರಿಂ ಬಳಿಕ ಇನ್ನೂರೆಪ್ಪತ್ತೈದು ಸಂವತ್ಸರಾನಂತರಂ ಇಂದ್ರಪುರ ದೊಳ್ಪಟ್ಟಂ ಕಟ್ಟಲು ಆತನು ತಕ್ಕದೇಶವನ್ನು ಸಾಧಿಸಿ ಬಳಿಕ ಆ ಕಾಲದಲ್ಲೋರ್ವ ಜಿನಮುನಿಯ ಪ್ರಥಮ ಪನೀಯಂ ಸುಂಕಮೆಂದು ಬೇಡಲವರು

ಕೊಟ್ಟು ಅಂತ ರಾಯವನ್ನು ಮಾಡಲು ಅವಧಿಜ್ಞಾನಂಪುಟ್ಟುಗುಮಿತ್ತಲಸುರದೇವಂ ಮುನಿಯು ಪಸರ್ಗವನ್ನು ತಿಳಿದು ಬಂದಾಕಾಲದ ಕಲ್ಕಿಯನ್ನು ವಜ್ರಾಯುಧದಿಂದ ಹೊಡೆದು ಕೊಲ್ಲಲು ಅವನ ಮಗನಾದ ಅಜಿತಂಜಯನು ಹೆದರಿ ತನ್ನ ಹೆಂಡತಿಯಾದ ಅಚೇಲೆ ವೆರಸು ಆ ಅಸುರ ದೇವನನ್ನು ಶರಣು ಹೊಂದಲು ಆಜಿತಂಜಯನನ್ನು ಸಂಯಕ್ತ್ವ ದಲ್ಲಿಯೂ ರಾಜ್ಯದಲ್ಲಿಯೂ ಇರಿಸಿದನು. ಅಲ್ಲಿ ಬಳಿಕ್ಕಂ ಸಮ್ಯಗ್‌ಧರ್ಮಂ ಕ್ರಮ ಹಾನಿಯಿಂ ಪ್ರವರ್ತಿಸಿಗುಂ ಇಂತು ಸಾಸಿರ ವರ್ಷಕ್ಕೊಬ್ಬ ಕಲ್ಕಿಯುಂ ಆಯ್ನೂರು ವರ್ಷಕ್ಕೊಬ್ಬ ಉಪಕಲ್ಕಿಯುಂ ಆಗುವುದು."

ಈಗ ಉಪಲಬ್ಧವಿರುವ ತಿಲೋಯಪಣ್ಣತ್ತಿಯಲ್ಲಿ ಪ್ರಕ್ಷಿಪ್ತವೆನ್ನಬಹುದಾದುದನ್ನು ಖಚಿತ ರೀತಿಯಿಂದ ಗುರುತಿಸುವುದಾದರೂ ಹೇಗೆ ? ಇದರಲ್ಲಿ ಈಗ ಕಂಡು ಬರುವ 'ಕಲ್ಕಿ' ಸಂಬಂಧಿಯಾದ ಐತಿಹ್ಯ ಮೌಲಿಕವಾದುದೆ ? ಇಲ್ಲವೆ ಪ್ರಕ್ಷಿಪ್ತವೆ ? ಎಂಬುದನ್ನು ನಿಶ್ಚಿತ ರೀತಿಯಿಂದ ತಿಳಿದಲ್ಲದೆ, ಇದರ ಆಧಾರದಿಂದ ಈ ಕೃತಿಯ ರಚನಾ ಕಾಲವನ್ನಾಗಲಿ. ಕರ್ತೃವಿನ ಕಾಲವನ್ನಾಗಲಿ ನಿಶ್ಚಯಿಸುವುದು ಸುಸಂಗತವಾಗಲಾರದು. ಶ್ರೀ ನಾಥೂರಾಂಪ್ರೇಮಿಯವರು ತಿಲೋಯಪಣ್ಣತ್ತಿಯಿಂದ ಉಲ್ಲೇಖಿಸಿರುವ ೯೪ನೇ ಗಾಹೆಯಲ್ಲಿ, ಕಲ್ಕಿರಾಜನ ಕಾಲವನ್ನು ಹೇಳುವಲ್ಲಿ 'ಕೇಈ ಏವಂ ಪರೂವಂತಿ'– 'ಕೆಲವರು ಹೀಗೆ ಪ್ರರೂಪಿಸುತ್ತಾರೆ' ಎಂದು ಹೇಳಿರುವುದರಿಂದ ತಿಲೋಯಪಣ್ಣತ್ತಿ ರಚನಕಾರರು ಇದನ್ನು ತಮಗಿಂತ ಹಿಂದಿನವರ ಕೃತಿಯೊಂದರಿಂದ ಉಲ್ಲೇಖಿಸಿರುವ ರೆಂದು ಸೂಚಿತವಾಗುವುದು. ಆದ್ದರಿಂದ ತಿಲೋಯಪಣ್ಣತ್ತಿ ರಚನಕಾರರು ಕಲ್ಕಿರಾಜನ ಸಮಕಾಲೀನರೆಂದಾಗಲಿ ಅಥವಾ ಸಮೀಪವರ್ತಿ ಕಿರಿಯ ಸಮಕಾಲೀನ ರೆಂದಾಗಲಿ ತಿಳಿಯುವುದು ಸೂಕ್ತವಾಗುವುದಿಲ್ಲ. ಇದಲ್ಲದೆ ಭ. ಮಹಾವೀರನ ನಿರ್ವಾಣ ಸಮಯವನ್ನು ಆಧಾರವಾಗಿಸಿ ಶಕರಾಜಕಾಲಾರಂಭದ ಗಣನೆಯ ಬಗ್ಗೆತಿಲೋಯಪಣ್ಣತ್ತಿಯಲ್ಲಿ ಹೇಳಲಾಗಿರುವ ನಾಲ್ಕು ಪ್ರಕಾರದ ಮತಗಳನ್ನು ಶ್ರೀನಾಥೂ ರಾಂ ಪ್ರೇಮಿಯವರು ಉಲ್ಲೇಖಿಸಿದ್ದಾರೆ.[೬೮] ಶ್ರೀ ವೀರಜಿನನ ನಿರ್ವಾಣ ಸಮಯ ದಿಂದ (೧) ೪೬೧ವರ್ಷ, (೨) ೯೭೮೫ವರ್ಷ, ೫ ತಿಂಗಳು, (೩) ೧೪೭೯೩ ವರ್ಶ ಮತ್ತು (೪) ೬೦೫ವರ್ಷ, ೫ ತಿಂಗಳು–(ಶಕರಾಜನಾಗಿದ್ದಾನೆ).

ಪ್ರಸ್ತುತ ಪ್ರಸಂಗದಲ್ಲಿ ಮಾಘನಂದಿಸ್ವಾಮಿಯವರ ಶಾಸ್ತ್ರಸಾರ ಸಾಮುಚ್ಚಯದಲ್ಲಿ (ಪು. ೨೮) ಶಕ ಕಾಲರಂಭದ ಬಗ್ಗೆ ಕೊಡಲಾಗಿರುವ ಭಿನ್ನಮತಗಳನ್ನು ಗಣನೆಗೆ ತಂದುಕೊಳ್ಳಬೇಕಾಗಿದೆ.

ಪಣ ಛಸ (ಅ) ವಸ್ಸಂ ಪಣಮಾಸಜುದಂ ಗಮಿಯ ವೀರಣೆಬ್ಬುದ ದೋ (?)

ಸಗರಾಜೋತೋಕಂತ್ರೀ (ಕಕ್ಕೀ ?) ಚವು ಣವತಿ ಸಹ (ಗ ?) ಸ್ಸದಿ (ಧಿ)ಯ ಸಗಮಾಸಂ ॥ ೨೧ ॥

ಪುನಃ ಈ ವರ್ಧಸ್ವಾಮಿಯು ಮೋಕ್ಷ ಹೊಂದಿದ ನಂತರ ಆರುನೂರೈದು ವರ್ಷವುಂ ಐದು ತಿಂಗಳುಂ ಕಳೆದ ಮೇಲೆ ಶಕರಾಜನು ಹುಟ್ಟಿದನು. ವರ್ಷಂ ೬೦೫– ಮಾಸ೫–ಆ ಅರಸನಿಂ ಬಳಿಕ ಕಲ್ಕಿಯುತ್ಪತ್ತಿ ವರ್ಷಂಗಳು ೩೯೪ ಮಾಂಸಂ ೭, ಮತ್ತು ಸಘಾತದವರು ಹೇಳುವ ಶಕನ ಕಾಲ ಹ್ಯಾಗೆಂದರೆ–

ಆರ್ಯ–ಷಟ್ ಶತನವ ವರುಷೇಭ್ಯಃ ಶಕಃ ಸುಮುತ್ಪನ್ನಃ ।

ವರ್ಧಮಾನ ಭಗವತಿ ಮೀಕ್ಷಗತೇ ಶ್ವೇತಪಟದೃಷ್ಟ್ಯಾ ॥

ಗಾಹೆ–ಪಚ್ಚಟ್ಟಸತ್ತಣಕವೇ ದಿ (ವ ?) ಸೇ ತೀದೇದು ಪಂಚಮಾಸ ಹೀಯೇ (ಸಹಿಯೇ?)

ಜಿಣಣೆಬ್ಬುಯ ದೋ (?) ಜಾದೋ (?) ಸಗರಾ ಓ ಜಾಬುತಿಯ ಮತೇ (?) ॥

ವರ್ಷಂಗಳು ೭೮೫, ಮಾಸ ೫.

ಆರ್ಯಾ– ತ್ರಿಕನವಕ ಸಪ್ತಚತುರೇಕ ವರ್ಷ ಸಂಖ್ಯಾಭಿರಜನಿ ಶಕರಾಜಃ ।

ಶ್ರೀ ವರ್ಧಮಾನ ಭಗವತಿ ಮೋಕ್ಷಗತೇ ಕಾಷ್ಟ ಸಂಗಮತೇ ॥

ವರ್ಷ ೨೪೭೯೩.

ಚಂದ್ರರ್ತುಜಲಧಿಸಂಖ್ಯಾಃ ಹಿತೇ ಸವರ್ಷೈಸ್ಸ (ಶ್ಯ?) ಕೋರ್ಧನವ ಮಾಸ್ಯೈಃ ।

ವುಡೆಪದಿ ವರ್ಧಮಾನೇ ಮೋಕ್ಷಗತೇ ದ್ರವಿಳಸಂಘಮತೇ ॥

ವರ್ಷ ೪೬೧(೯)ಮಾಸ ಅರ್ಥ ೧೫ (೪೬೧–೯–೧೫)

ಈ ರೀತಿಯಾಗಿ ಹೇಳಿದ ಮತಂಗಳಲ್ಲಿ ಮೊದಲ ಗಾಥಾಭಿಪ್ರಾಯದ ಶ್ರೀಸಂಘ ಮತವೇ ಸತ್ಯವು. ಶಾಸ್ತ್ರಾಸಾರದ ಈ ಉಲ್ಲೇಖಗಳು ತಿಲೋಯಪಣ್ಣತ್ತಿಗಿಂತ ಭಿನ್ನ ಮೂಲದವುಗಳಾಗಿವೆಯೆಂಬುದು ಗಮನಾರ್ಹವಗಿದೆ.